ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಂಬೈ ಇಂಡಿಯನ್ಸ್ ವಿರುದ್ಧ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅರ್ಧ ಶತಕ ಗಳಿಸಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ನಾಯಕ ಅಜಿಂಕ್ಯಾ ರಹಾನೆ ಅವರ ಬ್ಯಾಟಿಂಗ್ ವೈಖರಿ...

30 ಮಾರ್ಚ್ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 20 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ತೀರ್ಥಂಕರ ವರ್ಧಮಾನ ಮಹಾವೀರರ ಬದುಕು-ಚಿಂತನೆಗಳು » 2

ರಹಾನೆ, ರಘುವಂಶಿ ಸ್ಫೋಟಕ ಬ್ಯಾಟಿಂಗ್ » 3

ಪಶ್ಚಿಮ ಏಷ್ಯಾ ಬಿಕ್ಕಟ್ಟು ಸವಾಲು : ಮೋದಿ » 4

ಇಂದು ಮಹಾವೀರ ಜಯಂತಿ

• ಪ್ರಜೋದಯ ವರದಿ

ಹಾಸನ : ಹಾಸನಾಂಬ ಕಲಾಕ್ಷೇತ್ರದಲ್ಲಿ ಮಾ.30 ರಂದು ಬೆಳಿಗ್ಗೆ 10 ಗಂಟೆಗೆ ಮಹಾವೀರ ಜಯಂತಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಕಾರ್ಯ ಕ್ರಮ ಉದ್ಘಾಟಿಸುವರು. ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರೂ ಆದ ಶಾಸಕ ಕೆ.ಎಂ.ಶಿವಲಿಂಗೇಗೌಡ ಗೌರವ ಉಪಸ್ಥಿತಿ ವಹಿಸಲಿದ್ದು, ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ. ಪಟೇಲ್, ಮಾಜಿ ಸಚಿವ ಹೆಚ್.ಡಿ ರೇವಣ್ಣ, ಶಾಸಕರಾದ ಸಿ.ಎನ್.ಬಾಲಕೃಷ್ಣ, ಎ. ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು ಭಾಗವಹಿಸಲಿದ್ದಾರೆ, ಕೇಂದ್ರೀಯ ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಚಂದ್ರಕಾಂತ್ ಪಡೆಸೂರ್ ಅವರು ಉಪನ್ಯಾಸ ನೀಡುವರು.

ಇರಾನ್ ವಿರುದ್ಧ ಸೇನಾ ದಾಳಿಗೆ ಅಮೇರಿಕಾ ಸಿದ್ಧತೆ

ಟ್ರಂಪ್ ಆದೇಶಕ್ಕೆ ಕಾಯುತ್ತಿರುವ ಸೇನೆ | ಪ್ರತೀಕಾರಕ್ಕೆ ಸಿದ್ಧ ಎಂದ ಇರಾನ್

• ಪ್ರಜೋದಯ ವರದಿ

ವಾಷಿಂಗ್ಟನ್: ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ತೀವ್ರಗೊಂಡಿರುವ ಮಧ್ಯೆ ಇರಾನ್ ವಿರುದ್ಧ ಅಮೇರಿಕಾ ಸೇನಾ ಕಾರ್ಯಾಚರಣೆಗೆ ಸಿದ್ಧತೆ ನಡೆಸುತ್ತಿದೆ ಎನ್ನಲಾಗಿದ್ದು, ದಾಳಿ ಹಿಮ್ಮೆಟ್ಟಿಸಲು ನಾವೂ ಸನ್ನದ್ಧ ಎಂದು ಇರಾನ್ ಪ್ರತ್ಯುತ್ತರ ನೀಡಿದೆ.

ಅಮೇರಿಕಾ ದಾಳಿಗೆ ಸಿದ್ಧತೆ ನಡೆಸಿದೆ ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಇರಾನ್ ಮೇಲೆ ವಾರಗಳ ಕಾಲ ಮುಂದುವರಿಯಲಿರುವ ಸೇನಾ ಕಾರ್ಯಾಚರಣೆಗೆ ಅಮೇರಿಕಾ ಸಿದ್ಧತೆ ನಡೆಸುತ್ತಿದೆ ಎಂದು ಅಧಿಕಾರಿಗಳನ್ನು ಉಲ್ಲೇಖಿಸಿ ವರದಿ ಪ್ರಕಟಿಸಲಾಗಿದೆ. ಇದು ವಿಶೇಷ ಹಾಗು ಸಾಂಪ್ರದಾಯಿಕ ಶೈಲಿಯ ಮಿಲಿಟರಿ ಕಾರ್ಯಾಚರಣೆಗಳನ್ನು ಒಳಗೊಂಡಿರುವ ಸಾಧ್ಯತೆ ಇದೆ. ಅಮೇರಿಕಾ-ಇಸ್ರೇಲ್ ಹಾಗು ಇರಾನ್ ನಡುವಿನ ಯುದ್ಧವು ಐದನೇ ವಾರಕ್ಕೆ ಕಾಲಿಟ್ಟಿದೆ. ಅತ್ತ ಹಾರ್ಮುಜ್ ಜಲ ಸಂಧಿಯಲ್ಲಿ ಹಡುಗುಗಳ ಸಂಚಾರ ಬಂದ್ ಆಗಿರುವುದರಿಂದ ಜಾಗತಿಕವಾಗಿ ಇಂಧನ ಬಿಕ್ಕಟ್ಟು ತಲೆದೋರಿದೆ.

17 ಸಾವಿರ ತುಕಡಿಗಳು ಸಿದ್ಧ

ಇರಾನ್ ಮೇಲಿನ ಭೂದಾಳಿಗೆ ಅಮೇರಿಕ ಭೂ ಸೇನೆಯ 17 ಸಾವಿರ ತುಕಡಿಗಳು ಸಜ್ಜಾಗಿವೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅನುಮತಿಗೆ ಕಾಯುತ್ತಿದ್ದೇವೆಂದು ಸೇನಾಧಿಕಾರಿಗಳು ತಿಳಿಸಿದ್ದು, ಆರಂಭಿಕ ಹಂತದಲ್ಲಿ

ಪ್ರಮುಖ ದ್ವೀಪ ಪ್ರದೇಶಗಳು, ಪರಮಾಣು ಕೇಂದ್ರಗಳ ಮೇಲೆ ಹಿಡಿತ ಸಾಧಿಸುವ ಗುರಿಯೊಂದಿಗೆ ಭೂದಾಳಿಗೆ ಯೋಜನೆ ರೂಪಿಸಲಾಗಿದೆ. ಆದರೆ, ಪ್ರಬಲ ಭೂ ಸೇನೆ ಹೊಂದಿರುವ ಇರಾನ್ ವಿರುದ್ಧ ಭೂದಾಳಿ ಅಪಾಯಕಾರಿ ಎಂಬುದು ಟ್ರಂಪ್ ಆಡಳಿತಕ್ಕೆ ಅರಿವಿದೆ. 6 ಲಕ್ಷ ಯೋಧರು, 3.50 ಲಕ್ಷ ಸೇನಾ ತುಕಡಿ, 1.90 ಲಕ್ಷ ಐಆರ್‌ಜಿಸಿ ಯೋಧರ ಪಡೆ ಹೊಂದಿರುವ ಇರಾನ್ ಭೂದಾಳಿಗೆ ಪ್ರಬಲ ಪ್ರತಿರೋಧ ತೋರುವ ಸಾಧ್ಯತೆಗಳಿವೆ.

ಹೆಜ್ಬೊಲ್ಲಾ ಕಮಾಂಡರ್ ಹತ್ಯೆ

ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಹೆಜ್ಬೊಲ್ಲಾ ಬಂಡುಕೋರ ಪಡೆಯ ಯುದ್ಧ ಟ್ಯಾಂಕ್ ನಿಗ್ರಹ ದಳದ ಕಮಾಂಡರ್ ಹಸನ್ ಮೊಹಮ್ಮದ್ ಬಶೀರ್ ಹತನಾಗಿದ್ದಾನೆ. ದಕ್ಷಿಣ ಲೆಬನಾನ್‌ನ ಲಿಟಾನಿ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಬಶೀರ್ ಹತರಾಗಿದ್ದಾನೆಂದು ಐಡಿಎಫ್ ಹೇಳಿಕೊಂಡಿದೆ.

ಭೀಕರ ದಾಳಿಗೆ ಕಾರಣರಾದ ಇಬ್ಬರ ಗುರುತು ಬಹಿರಂಗ

ಟೆಹರಾನ್: ಮಿನಾಬ್ ಪ್ರದೇಶದಲ್ಲಿ ಶಾಲೆ ಮೇಲೆ ಕ್ಷಿಪಣಿ ದಾಳಿ ನಡೆಸಿ ಮಕ್ಕಳು ಸೇರಿ 175 ಮಂದಿಯ ಸಾವಿಗೆ ಕಾರಣರಾಗಿದ್ದಾರೆಂದು ಪರಿಗಣಿಸಲಾಗಿರುವ ಅಮೇರಿಕಾದ ನೌಕಾಪಡೆಯ ಇಬ್ಬರು ಅಧಿಕಾರಿಗಳ ಗುರುತನ್ನು ಇರಾನ್ ಬಹಿರಂಗಪಡಿಸಿದ್ದು, ಅಮೇರಿಕಾ ವಿರುದ್ಧ ಕಿಡಿಕಾರಿದೆ.

ಭಾರತ, ದಕ್ಷಿಣ ಆಫ್ರಿಕಾ ಮತ್ತು ನೈಜೀರಿಯಾ ದಲ್ಲಿರುವ ಇರಾನ್‌ನ ರಾಯ ಭಾರ ಕಚೇರಿಗಳು ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಅಧಿಕಾರಿಗಳ ಚಿತ್ರಗಳನ್ನೂ ಎಕ್ಸ್ ನಲ್ಲಿ ಪೋಸ್ಟ್ ಮಾಡಿವೆ. ಯುದ್ಧನೌಕೆ ಯುಎಸ್‌ಎಸ್ ಸ್ಪ್ರೂನ್‌ನ ಕಮಾಂಡಿಂಗ್ ಆಫೀಸರ್ ಲೀ ಆರ್ ಟೇಟ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಜೆಫ್ರಿ ಇ ಯಾರ್ಕ್ ಈ ದಾಳಿಯ ಹೊಣೆಗಾರರು ಎಂದು ತಿಳಿಸಿದೆ. ಮೂರು ಬಾರಿ ಟೊಮಾಹಾಕ್ ಕ್ಷಿಪಣಿಗಳನ್ನು ಉಡಾಯಿಸಲು ಆದೇಶಿಸುವ ಮೂಲಕ ಮಿನಾಬ್ ನಲ್ಲಿ 168 ಮುಗ್ಧ ಶಾಲಾ ಮಕ್ಕಳನ್ನು ಕೊಂದರು. ಅವರಿಗೆ ಮಕ್ಕಳಿದ್ದಾರೆಯೇ. ಇಂತಹ ಕೃತ್ಯ ಎಸಗಿರುವ ಅವರಿಗೆ ರಾತ್ರಿ ಹೇಗೆ ನಿದ್ದೆ ಬರುತ್ತದೆ ಎಂದು ಪಶ್ನಿಸಿದೆ.

ಅಮೇರಿಕಾದ ಕದನ ವಿರಾಮ ಪ್ರಸ್ತಾಪದ ನಡುವೆಯೂ ಇರಾನ್-ಇಸ್ರೇಲ್ ದಾಳಿ ಮುಂದುರಿಸಿವೆ. ಟೆಹ್ರಾನ್ ಸೇರಿ ಹಲವು ಪ್ರಮುಖ ಇರಾನಿಯನ್ ಮಿಲಿಟರಿ, ಕೈಗಾರಿಕೆ ನೆಲೆಗಳು, ಪರಮಾಣು ಕೇಂದ್ರಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ಪ್ರತಿ ದಾಳಿ ನಡೆಸಿರುವ ಇರಾನ್, ನೆರೆಯ ಕೊಲ್ಲಿ ದೇಶಗಳಾದ ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಬಹರೇನ್ ಮೇಲೆ ವೈಮಾನಿಕ ದಾಳಿ ನಡೆಸಿದೆ. ದಾಳಿಯಲ್ಲಿ ಅಮೇರಿಕಾದ 10 ಯೋಧರು ಗಾಯಗೊಂಡಿದ್ದಾರೆ. ಇರಾನಿಯನ್ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಸೌದಿ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

ಮಿತ್ರ ರಾಷ್ಟ್ರ ಗುರಿಯಾಗಿಸಿ ಪ್ರತ್ಯುತ್ತರ

ಅಮೇರಿಕಾ ಸೇರಿ ಮಿತ್ರ ರಾಷ್ಟ್ರಗಳನ್ನು ಗುರಿ ಯಾಗಿಸಿಕೊಂಡು ಶಿಕ್ಷಿಸಲಾಗುತ್ತದೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಖಲಿಬಾಫ್ ಅವರು ಎಚ್ಚರಿಕೆ ನೀಡಿದ್ದಾರೆ. ನಮ್ಮ ದೃಢ ನಿಶ್ಚಯ ಮತ್ತು ನಂಬಿಕೆ ಹೆಚ್ಚಾಗಿದೆ. ಹೀಗಾಗಿ, ಇರಾನ್ ನೆಲದ ಮೇಲೆ ದಾಳಿ ಮಾಡಲು ಮುಂದಾದರೆ, ಅಮೇರಿಕಾದ ಪಡೆಗಳು ಮತ್ತು ಈ ಪ್ರದೇಶದಲ್ಲಿ ಮಿತ್ರ ರಾಷ್ಟ್ರಗಳ ವಿರುದ್ಧ ತೀವ್ರ ಪ್ರತೀಕಾರ ತೀರಿಸಿಕೊಳ್ಳುವ ಬೆದರಿಕೆ ಹಾಕಿದೆ.

ಚನ್ನಕೇಶವ ದೇವಾಲಯ ಸಮೀಪದ ರಸ್ತೆಗಳಲ್ಲಿ ವಾಹನ ಸಂಚಾರ ನಿಷೇಧ

• ಪ್ರಜೋದಯ ವರದಿ

ಬೇಲೂರು : ಪಟ್ಟಣದ ಚನ್ನಕೇಶವ ಸ್ವಾಮಿ ರಥೋತ್ಸವ ಅಂಗವಾಗಿ ಸಂಚಾರ ದಟ್ಟಣೆ ನಿಯಂತ್ರಣ ಉದ್ದೇಶದಿಂದ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ತಾತ್ಕಾಲಿಕ ವಾಹನ ಸಂಚಾರ ನಿಷೇಧಿಸಲಾಗಿದೆ.

ಮಾ.23ರಿಂದ ಪ್ರಾರಂಭವಾಗಿ ರುವ ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವ ಏ.5ರ ವರೆಗೆ ನಡೆಯಲಿದೆ. ಮಾ.31 ಹಾಗು ಏ.1ರಂದು ನಡೆಯಲಿರುವ ಬ್ರಹ್ಮ ರಥೋತ್ಸವಕ್ಕೆ ಸಾವಿರಾರು ಸಂಖ್ಯೆ ಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಹಿನ್ನಲೆಯಲ್ಲಿ ಪಟ್ಟಣದಲ್ಲಿ ವಾಹನಗಳ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಕೆ. ಎಸ್. ಲತಾಕುಮಾರಿ ಅವರು ಆದೇಶಿಸಿದ್ದಾರೆ.

ರಥೋತ್ಸವ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಏ.2ರ ವರೆಗೆ ದೇವಸ್ಥಾನದ ಮುಖ್ಯ ರಸ್ತೆ, ವೈಕುಂಠ ಬೀದಿ, ಕೆರೆ ಬೀದಿ, ಮಸೀದಿ ರಸ್ತೆ, ದೇವಸ್ಥಾನ ಮುಂಭಾಗ ಹಾಗು ಹಿಂಭಾಗದ ರಸ್ತೆ, ದೇವಸ್ಥಾನದ ಎಡ ಹಾಗು ಬಲ ಭಾಗದ ರಸ್ತೆಗಳಲ್ಲಿ ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 115 ಮತ್ತು ನಿಯಮ 221ಎ(5) ಅನ್ವಯ ಸಂಚಾರ ನಿಷೇಧಿಸಲಾಗಿದೆ.

ರಥೋತ್ಸವದ ದಿನಗಳಲ್ಲಿ ಭಕ್ತರು ಹಾಗು ಸಾರ್ವಜನಿಕರು ಪರ್ಯಾಯ ಮಾರ್ಗಗಳನ್ನು ಬಳಸುವಂತೆ ಸೂಚಿಸಲಾಗಿದೆ. ತುರ್ತು ಸೇವೆಗಳಾದ ಆ್ಯಂಬುಲೆನ್ಸ್, ಅಗ್ನಿಶಾಮಕ ವಾಹನ ಗಳಿಗೆ ಮಾತ್ರ ವಿಶೇಷ ಅನುಮತಿ ನೀಡಲಾಗಿದೆ. ಅಲ್ಲದೆ ಪೊಲೀಸ್, ಸಾರಿಗೆ, ಕೆಎಸ್‌ಆರ್‌ಟಿಸಿ, ಲೋಕೋಪ ಯೋಗಿ ಇಲಾಖೆ ಸಂಬಂಧಿತ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಿ ಸಂಚಾರ ವ್ಯವಸ್ಥೆ ಹಾಗು ಭದ್ರತೆ ಕಾಪಾಡುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಆದೇಶ ಹಿನ್ನಲೆಯಲ್ಲಿ ಸೂಚಿತ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಿ ಪೊಲೀಸ್ ಬಿಗಿ ಭದ್ರತೆ ವಹಿಸಲಾಗಿದೆ.

ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ, ಪಿಎಸ್‌ಐ ಶಿವನಗೌಡ ಜಿ.ಪಾಟೀಲ್,

ಸಹೋದರಿ 11ನೇ ದಿನದ ಕಾರ್ಯದಲ್ಲಿ ದೇವೇಗೌಡರು ಭಾಗಿ

• ಪ್ರಜೋದಯ ವರದಿ

ಹೊಳೆನರಸೀಪುರ : ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಇತ್ತೀಚೆಗೆ ನಿಧನರಾದ ಸಹೋದರಿ ಜವರಮ್ಮ (88) ಅವರ 11ನೇ ದಿನದ ಆರಾಧನಾ ಕಾರ್ಯದಲ್ಲಿ ಭಾಗವಹಿಸಿದರು. ಬೆಂಗಳೂರಿನಿಂದ ಹೆಲಿಕಾಪ್ಟರ್ ನಲ್ಲಿ ಹುಟ್ಟೂರು ಹರದನಹಳ್ಳಿಗೆ ಬಂದ ಅವರು ಕಾರಿನಲ್ಲಿ ಬಸವ ನಾಯಕನಹಳ್ಳಿ ಗ್ರಾಮಕ್ಕೆ ಆಗಮಿಸಿ ಪೂಜೆಯಲ್ಲಿ ಪಾಲ್ಗೊಂಡರು. ಸಹೋದರಿಯನ್ನು ನೆನೆದು ದೇವೇಗೌಡರು ಭಾವುಕರಾದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ತಂದೆ ದೊಡ್ಡೇಗೌಡರಿಗೆ ಇಬ್ಬರು ಹೆಂಡತಿಯರು. ಮೊದಲ ಪತ್ನಿಗೆ ಜನಿಸಿದ ಮೂವರು ಗಂಡು ಮಕ್ಕಳು ಅಕಾಲಿಕವಾಗಿ ಸಾವಿಗೀಡಾದ ಬಳಿಕ ತಂದೆ ನಮ್ಮ ತಾಯಿ ದೇವಮ್ಮ ಅವರನ್ನು ವಿವಾಹವಾದರು. ದೇವಮ್ಮಗೆ ನಾನು ಮೊದಲೇ ಮಗ. ಮಾ.19ರಂದು ನಿಧನರಾಗಿರುವ ಜವರಮ್ಮ ನನಗಿಂತ ಮೂರು ವರ್ಷ ಚಿಕ್ಕವಳು. ಊರಿಗೆ ಸಮೀಪ ಎಂಬ ಕಾರಣಕ್ಕೆ ಬಸವ ನಾಯಕನಹಳ್ಳಿಯಲ್ಲಿ ಸಂಬಂಧ ಹುಡುಕಿ ಮದುವೆ ಮಾಡಿಕೊಟ್ಟಿದ್ದರು.

ಜವರಮ್ಮಗೆ ನಾಲ್ವರು ಪುತ್ರಿಯರು ಹಾಗು ಮೂವರು ಗಂಡು ಮಕ್ಕಳಿದ್ದಾರೆಂದು ತಿಳಿಸಿದರು.

ಪ್ರಧಾನಿಯಿಂದ ವಿಷಯ ತಿಳಿಯಿತು

ಜವರಮ್ಮ ನಿಧನರಾದ ಸುದ್ದಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನನಗೆ ತಿಳಿಸಿದರು. ಸಣ್ಣ ಹಳ್ಳಿಯಲ್ಲಿ ವಾಸ ಮಾಡುತ್ತಿದ್ದ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಮಗಳ ಸಾವಿಗೆ ದೇಶದ ಪ್ರಧಾನಿ ಸಂತಾಪ ಸೂಚಿಸಿದರು. ನಾನು ಸಹ ಹಳ್ಳಿಯಲ್ಲೇ ಹುಟ್ಟಿದವನು. ಆಕಸ್ಮಿಕವಾಗಿ ರಾಜಕಾರಣದಲ್ಲಿ ಹೋರಾಟ ಮಾಡಿರಬಹುದು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ಭಾವನೆಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಮೋದಿ ಸೂಕ್ಷ್ಮ ಮನಸ್ಸಿನವರಾಗಿದ್ದು, ಅವರಿಗೆ ನನ್ನ ಕುಟುಂಬದ ಪರವಾಗಿ ಆಭಾರಿಯಾಗಿದ್ದೇನೆ. ಅವರ ಭಾವನೆಗಳನ್ನು ನಾನು ಜೀವನದ ಕೊನೆಯ ವರೆಗೆ ಮರೆಯುವುದಿಲ್ಲ ಎಂದರು.

ಈಗ ರಾಜಕೀಯ ಮಾತನಾಡುವುದು ಸರಿಯಲ್ಲ, ಸಂಸತ್ ಅಧಿವೇಶನ ಮುಗಿದು ಬಳಿಕ ದೆಹಲಿಯಿಂದ ನೇರವಾಗಿ ಹಾಸನಕ್ಕೆ ಬಂದು ಎಲ್ಲರನ್ನೂ ಭೇಟಿಯಾಗುತ್ತೇನೆಂದು ಹೇಳಿದರು. ಮಾಜಿ ಸಚಿವ ರೇವಣ್ಣ ಹಾಗು ಕುಟುಂಬ ಸದಸರಿದ್ದರು.

ಅಗಿಲೆ ಘಟಕದ ತ್ಯಾಜ್ಯ ವಿಲೇವಾರಿಗೆ ಪಾಲಿಕೆ ಕ್ರಮ

8 ಕೋ.ರೂ.ಗೆ ಟೆಂಡರ್ | ನಿತ್ಯ 100 ಟನ್ ಕಸ ಸಂಗ್ರಹ

ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

ಹಾಸನ: ನಗರ ಹೊರವಲಯದ ಅಗಿಲೆ ನೆಲಭರ್ತಿ ಘಟಕದಲ್ಲಿ ದಶಕಗಳಿಂದ ಸಂಗ್ರಹವಾಗಿರುವ ತ್ಯಾಜ್ಯ ವಿಲೇವಾರಿಗೆ ಮಹಾನಗರ ಪಾಲಿಕೆ ಕೊನೆಗೂ ಕ್ರಮ ಕೈಗೊಂಡಿದ್ದು, ಸಮಸ್ಯೆಗೆ ಮುಕ್ತಿ ಸಿಗುವ ನಿರೀಕ್ಷೆ ಮೂಡಿದೆ.

ನಗರದಲ್ಲಿ ನಿತ್ಯ 100 ಟನ್‌ನಷ್ಟು ತ್ಯಾಜ್ಯ ಸಂಗ್ರಹವಾಗುತ್ತದೆ. ನಗರ ಸಭೆ ಇದ್ದಾಗ 75 ರಿಂದ 80 ಟನ್‌ಗಷ್ಟೇ ಸೀಮಿತವಾಗಿದ್ದ ಕಸದ ಪ್ರಮಾಣ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ಸುತ್ತಲಿನ ಹಳ್ಳಿಗಳ ತ್ಯಾಜ್ಯವನ್ನು ಪಾಲಿಕೆಯೇ ವಿಲೇವಾರಿ ಮಾಡಬೇಕಾಗಿದೆ. ಅದರಿಂದ ತ್ಯಾಜ್ಯದ ಮಿತಿ ಏರಿಕೆಯಾಗಿದ್ದು, ವೈಜ್ಞಾನಿಕ ವಿಲೇವಾರಿ ಸವಾಲಾಗಿ ಪರಿಣಮಿಸಿದೆ. ಹಲವು ವರ್ಷಗಳಿಂದ ಅಗಿಲೆ ನೆಲ ಭರ್ತಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆಯಾದರೂ ಆಧುನಿಕ ಯಂತ್ರೋಪಕರಣಗಳ ಕೊರತೆ, ಸೀಮಿತ ಸಿಬ್ಬಂದಿ ಹಾಗು ತ್ಯಾಜ್ಯ ಪ್ರಮಾಣ ಹೆಚ್ಚಿರುವುದರಿಂದ ವಿಲೇ

ವಾರಿ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ.

8 ಕೋ. ರೂ.ಗೆ ಟೆಂಡರ್

ಘಟಕದಲ್ಲಿ ಅಂದಾಜು 1.50 ಲಕ್ಷ ಟನ್‌ನಷ್ಟು ತ್ಯಾಜ್ಯವಿದೆ. ಅದನ್ನು ವಿದ್ಯುತ್ ಉತ್ಪಾದನೆ ಉದ್ದೇಶದಿಂದ ಖಾಸಗಿ ಸಂಸ್ಥೆಗೆ ನೀಡಲಾಗಿದೆ. 8 ಕೋ.ರೂ.ಗೆ ಟೆಂಡರ್ ಮುಗಿದಿದ್ದು, ಶೀಘ್ರವೇ ಕಸದ ಸಮಸ್ಯೆಗೆ ಪರಿಹಾರ ದೊರೆಯಲಿದೆ. ದಶಕಗಳಿಂದ ಕಸ ಸುರಿಯುತ್ತಲೇ ಇರುವ ಪರಿಣಾಮ ದುರ್ನಾತ ಬೀರುತ್ತಿದೆ. ಮಾಂಸ, ಮತ್ತಿತರ ಪದಾರ್ಥಗಳನ್ನು ಅರಸಿ ಬೀದಿ ನಾಯಿಗಳು ಬರುತ್ತವೆ. ತ್ಯಾಜ್ಯ ಸುತ್ತಲಿನ ಜಮೀನಿಗೂ ವ್ಯಾಪಿಸುತ್ತಿರುವುದರಿಂದ ಕೃಷಿ ಚಟುವಟಿಕೆಗೂ ಅಡ್ಡಿಯಾಗುತ್ತಿದೆ. ಹೀಗಾಗಿ ಅಗಿಲೆ

ತ್ಯಾಜ್ಯ ವಿಲೇವಾರಿಗೆ ಬೇಕು 16 ತಿಂಗಳು

ಮುಂಬೈನ ಆದರ್ಶ್ ಭಾರತ್ ಪ್ರೈವೆಟ್ ಲಿಮಿಟ್‌ಗೆ ತ್ಯಾಜ್ಯ ವಿಲೇವಾರಿ ಟೆಂಡರ್ ಆಗಿದ್ದು, ಅಗಿಲೆ ನೆಲಭರ್ತಿ ಘಟಕದಲ್ಲಿ ಸಂಗ್ರಹವಾಗಿರುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು 16 ತಿಂಗಳು ಸಮಯ ಬೇಕಿದೆ. ಆದಷ್ಟು ಶೀಘ್ರದಲ್ಲೇ ಕೆಲಸ ಪ್ರಾರಂಭವಾಗಲಿದ್ದು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿ ಕಸದಿಂದ ರಸ ಮಾಡುವ ಕೆಲಸಕ್ಕೆ ಚಾಲನೆ ಸಿಗಲಿದೆ ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ಹೇಳಿದ್ದಾರೆ.

ಹಾಗು ಸುತ್ತಲಿನ ಗ್ರಾಮಸ್ಥರು ಮಹಾನಗರ ಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಲೇ ಇದ್ದಾರೆ. ಈ ಎಲ್ಲಾ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಅಧಿಕಾರಿಗಳು ಲಕ್ಷ ಟನ್ ತ್ಯಾಜ್ಯಕ್ಕೆ ಮುಕ್ತಿ ಕಾಣಿಸಲು ನಿರ್ಧರಿಸಿದ್ದಾರೆ. ಅಗಿಲೆ ಘಟಕದಲ್ಲಿ ಜಾಗ ಲಭ್ಯವಾದರೆ ನಗರದಲ್ಲಿ ಸಂಗ್ರಹವಾಗುತ್ತಿರುವ ಕಸವನ್ನು ಅಲ್ಲಿಗೆ ಹಾಕಬಹುದೆಂಬುದು ಲೆಕ್ಕಾಚಾರವಾಗಿದೆ.

ನಗರದ ಸೌಂದರ್ಯ ವೃದ್ಧಿ ಹಾಗು ವೈಜ್ಞಾನಿಕ ಕಸ ವಿಲೇವಾರಿಗಾಗಿ ಸ್ಟಾಟರ್ ಹೌಸ್, ಡಂಪಿಂಗ್ ಯಾರ್ಡ್ ನಲ್ಲಿ ಬಯೋ ಮೈನಿಂಗ್ ಇತ್ಯಾದಿ ನಿರ್ಮಾಣಕ್ಕೆ 25.30 ಕೋ. ರೂ.ಗಳನ್ನು 2026-27ನೇ ಸಾಲಿನ ಬಜೆಟ್‌ನಲ್ಲಿ ಮೀಸಲಿಡಲಾಗಿದೆ.

ಪ್ರತ್ಯೇಕ ಕಸ ಅನುಷ್ಠಾನ ಕಷ್ಟ

ಮಹಾನಗರ ಪಾಲಿಕೆಯಲ್ಲಿ ಸಿಬ್ಬಂದಿ ಕೊರತೆ ವಿಪರೀತವಾಗಿರುವ ಹಿನ್ನಲೆಯಲ್ಲಿ ಸಾರ್ವಜನಿಕರಿಂದ ಹಸಿ ಹಾಗು ಒಣ ಕಸ ಪ್ರತ್ಯೇಕವಾಗಿ ಸ್ವೀಕರಿಸಿ ವಿಲೇವಾರಿ ಕೆಲಸ ಸುಲಭವಾಗಿಸಿಕೊಳ್ಳಬೇಕೆಂಬ ಪ್ರಯತ್ನ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರುತ್ತಿಲ್ಲ. ಸಾರ್ವಜನಿಕರು ಈ ಬಗ್ಗೆ ಗಂಭೀರವಾಗಿ ಪರಿಗಣಿಸದೆ ಇರುವುದು ಒಂದು ಸಮಸ್ಯೆಯಾದರೆ ಮತ್ತೊಂದೆಡೆ ಕಸ ಸಂಗ್ರಹ ಆಟೋಗಳಲ್ಲಿ ಬರುವ ಸಿಬ್ಬಂದಿ ಸಹ ಎರಡೂ ಬಗೆಯ ಕಸವನ್ನು ಒಟ್ಟಿಗೆ ಹಾಕಿಕೊಳ್ಳುತ್ತಾರೆ. ಅದು ಸಂತೆಪೇಟೆಯಲ್ಲಿ ನಡೆಯುವ ಕಸ ಪ್ರತ್ಯೇಕಿಸುವ ಕಾರ್ಯಕ್ಕೆ ವೇಗ ನೀಡಲು ಸಾಧ್ಯವಾಗುತ್ತಿಲ್ಲ.

ಪೌರ ಕಾರ್ಮಿಕರು ಹಾಗು ಹೊರ ಗುತ್ತಿಗೆ ಆಧಾರದಡಿ ಕಸ ಸಂಗ್ರಹ ಕೆಲಸಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ ಮನೆ ಮನೆಗೆ ಹೋಗುವುದಕ್ಕಿಂತ ಹೋಟೆಲ್, ಅಂಗಡಿ ಮುಂಗಟ್ಟುಗಳತ್ತ ದೃಷ್ಟಿ ಹರಿಸುತ್ತಾರೆ. ಮನೆಯವರು ನೀಡುವ ಹಣ ಕಡಿಮೆ ಇದ್ದು, ಅಂಗಡಿಯವರು ಹೆಚ್ಚಿನ ಪ್ರಮಾಣದಲ್ಲಿ ಹಣ ನೀಡುತ್ತಾರೆ. ಹೀಗಾಗಿ ಸಾರ್ವಜನಿಕರು ರಸ್ತೆಯ ಎಲ್ಲೆಂದರಲ್ಲಿ ಕಸ ಸುರಿಯುವ ಪರಿಪಾಠ ಮುಂದುವರಿಸಿಕೊಂಡಿದ್ದಾರೆ. ರಸ್ತೆ ಬದಿ ಕಸ ಸುರಿಯುವವರ ವಿರುದ್ಧ ಮಹಾನಗರ ಪಾಲಿಕೆ ದಂಡ ವಿಧಿಸುವುದು, ತಪ್ಪಿತಸ್ಥರ ಮನೆ ಮುಂದೆ ಕಸ ಸುರಿದು ಪಾಠ ಕಲಿಸಲು ಮುಂದಾಯಿತಾದಾರೂ ಅದು ಕೆಲವೇ ದಿನಗಳಿಗೆ ಸೀಮಿತವಾಯಿತು. ಹೀಗಾಗಿ ಮತ್ತೆ ನಗರದ ಎಲ್ಲೆಂದರಲ್ಲಿ ಅಶುಚಿತ್ವ ಮಿತಿ ಮೀರಿದೆ.

ಖರೀದಿ ನೆಪದಲ್ಲಿ ಚಿನ್ನದ ಸರ ಕದ್ದು ಪರಾರಿ

• ಪ್ರಜೋದಯ ವರದಿ

ಬೇಲೂರು: ಚಿನ್ನಾಭರಣ ಖರೀದಿ ನೆಪದಲ್ಲಿ ಜ್ಯುವೆಲ್ಲರಿ ಶಾಪ್‌ಗೆ ಬಂದ ಕಿಡಿಗೇಡಿ ಮಾಲೀಕರ ಗಮನ ಬೇರೆಡೆ ಸೆಳೆದು 1.90 ಲಕ್ಷ ರೂ. ಮೌಲ್ಯದ 12 ಗ್ರಾಂ ತೂಕದ ಚಿನ್ನದ ಸರ ಕಳವು ಮಾಡಿರುವ ಘಟನೆ ಪಟ್ಟಣದ ಗಾಣಿಗರ ಬೀದಿಯಲ್ಲಿರುವ ಕನ್ನಿಕಾ ಜ್ಯುವೆಲ್ಲರಿ ಅಂಗಡಿಯಲ್ಲಿ ನಡೆದಿದೆ.

ಅಂಗಡಿ ಮಾಲೀಕ ಅಮೃತ್ ಅವರು ಇದ್ದಾಗ ಮಾಸ್ಕ್ ಧರಿಸಿ ಬಂದ ಅಪರಿಚಿತ ತಾಳಿ ಗುಂಡು ಹಾಗು ಚಿನ್ನದ ಸರ ತೋರಿಸಿ ಎಂದು ಕೇಳಿದ್ದಾನೆ. ನಂತರ ಉಂಗುರ ತೋರಿಸುವಂತೆ ಕೇಳಿದ್ದಾನೆ. ಉಂಗುರ

ತೋರಿಸಲು ಬೇರೆ ಕಡೆ ತಿರುಗುತ್ತಿದ್ದಂತೆ ಟೇಬಲ್ ಮೇಲೆ ಇಟ್ಟಿದ್ದ ಚಿನ್ನದ ಸರವನ್ನು ಜೇಬಿಗೆ ಹಾಕಿಕೊಂಡು ಪರಾರಿಯಾಗಿದ್ದಾನೆ.

ಕಳವಾಗಿರುವ ಸರವು ಸುಮಾರು 12 ಗ್ರಾಂ ತೂಕ ಹೊಂದಿದ್ದು, ಅದರ ಮೌಲ್ಯ ಸುಮಾರು 1.90 ಲಕ್ಷ ರೂ. ಎಂದು ಅಮೃತ್ ಅವರು ತಿಳಿಸಿದ್ದಾರೆ. ಸಿಸಿಟಿವಿ ಕ್ಯಾಮರಾದಲ್ಲಿ ಕಳ್ಳನ ಕರಾಮತ್ತು ಸೆರೆಯಾಗಿದ್ದು, ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೊಗೋಡು ಭಾಗದಲ್ಲಿ ಮತ್ತೆ ಕಾಡಾನೆಗಳ ಪ್ರತ್ಯಕ್ಷ

• ಪ್ರಜೋದಯ ವರದಿ

ಬೇಲೂರು: ಕಳೆದ ಹಲವು ದಿನಗಳಿಂದ ಕಾಣಿಸಿಕೊಳ್ಳದಿದ್ದ ಕಾಡಾನೆಗಳ ಹಿಂಡು ತಾಲ್ಲೂಕಿನ ಕೊಗೋಡು ವ್ಯಾಪ್ತಿಯಲ್ಲಿ ಭಾನುವಾರ ಮತ್ತೆ ಕಾಣಿಸಿಕೊಂಡಿದ್ದು ರೈತರಲ್ಲಿ ಆತಂಕವನ್ನುಂಟು ಮಾಡಿವೆ.

ಸುಮಾರು ಎರಡು ತಿಂಗಳಿನಿಂದ ಈ ವ್ಯಾಪ್ತಿಯಲ್ಲಿ ಆನೆಗಳ ಓಡಾಟ ಇರಲಿಲ್ಲ. ಕೂಲಿ ಕಾರ್ಮಿಕರು, ರೈತರು ಭಯವಿಲ್ಲದೆ ತೋಟದ ಕೆಲಸಗಳಲ್ಲಿ ತೊಡಗಿಸಿ ಕೊಂಡಿದ್ದರು. ರಸ್ತೆಯ ಎಲ್ಲೆಂದರಲ್ಲಿ ಕಾಡಾನೆಗಳು ಪ್ರತ್ಯಕ್ಷವಾಗುತ್ತಿದ್ದವು ಮಾತ್ರವಲ್ಲದೆ ದಾಳಿಗೆ ಮುಂದಾಗುತ್ತಿದ್ದವು. ಅರಣ್ಯ ಇಲಾಖೆ ಅಧಿಕಾರಿ ಹಾಗು ಸಿಬ್ಬಂದಿ ಆನೆಗಳು ಬೇರೆ ಕಡೆ ಓಡಿಸಿದ್ದಾರೆಂಬ ನೆಮ್ಮದಿಗೆ ಮತ್ತೆ ಭಂಗ ಬಂದಂತಾಗಿದೆ.

ಆನೆಗಳು ಮತ್ತೆ ಗ್ರಾಮಗಳತ್ತ ಮುಖ ಮಾಡಿದ್ದು, ವಿಶೇಷವಾಗಿ ಕಾಫಿ ತೋಟ ಹಾಗು

» ನಾಲ್ಕನೇ ಪುಟದಲ್ಲಿ

ಮಹಿಳಾ ದಿನ: ಪೌರ ಕಾರ್ಮಿಕರಿಗೆ ಸನ್ಮಾನ

• ಪ್ರಜೋದಯ ವರದಿ

ಹಾಸನ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಮಹಿಳಾ ಘಟಕ ಹಾಗು ಅರಳಿಕಟ್ಟೆ ಜೀರ್ಣೋದ್ಧಾರ ಸೇವಾ ಸಮಿತಿಯಿಂದ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಪೌರ ಕಾರ್ಮಿಕರಿಗೆ ಸನ್ಮಾನಿಸಲಾಯಿತು.

ಮಹಾಸಭಾ ತಾಲ್ಲೂಕು ಉಪಾಧ್ಯಕ್ಷೆ ಎಂ.ಬಿ.ಗಿರಿಜಾಂಬಿಕಾ ಅವರು ಮಾತನಾಡಿ, ಸಾರ್ವಜನಿಕರು ಹಾಗು ನಗರದ ಆರೋಗ್ಯ ಕಾಪಾಡುವಲ್ಲಿ ಪೌರ ಕಾರ್ಮಿಕರ ಸೇವೆ ಶ್ಲಾಘನೀಯವಾಗಿದೆ. ಮಳೆ, ಚಳಿ, ಬಿಸಿಲನ್ನು ಲೆಕ್ಕಿಸದೆ ಪೌರ ಕಾರ್ಮಿಕರು ನಿತ್ಯ ಕೆಲಸ ಮಾಡುತ್ತಾರೆ. ಅವರು ಒಂದು ದಿನ ಕೆಲಸ ಮಾಡದ ದಿನವನ್ನು ನಮ್ಮಿಂದ ಊಹಿಸಲು ಸಾಧ್ಯವಿಲ್ಲವೆಂದರು.

ಸನ್ಮಾನ ಸ್ವೀಕರಿಸಿದ ಪೌರ ಕಾರ್ಮಿಕರಾದ ಮಂಗಳಮ್ಮ ಮತ್ತು ಅನುರಾಧ ಅವರು ಮಾತನಾಡಿ, ಪೌರ ಕಾರ್ಮಿಕರನ್ನು ಎಂದೂ ಕೀಳಾಗಿ ಕಾಣಬಾರದು. ಸೂರ್ಯ ಉದಯಿಸುವ ಮೊದಲೇ ಎದ್ದು ಕಾಯಕವನ್ನು ನಿಷ್ಠೆಯಿಂದ ಮಾಡುತ್ತೇವೆ. ಆ ಮೂಲಕ ಬದುಕು ಕಟ್ಟಿಕೊಂಡಿದ್ದೇವೆ. ನಮ್ಮದು ನಿತ್ಯವೂ ಹೋರಾಟದ ಬದುಕೆಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಅವರು ಮಾತನಾಡಿ, ಕಾಯಕಕ್ಕೆ ಯಾವುದೇ ಮೇಲು ಕೀಳು ಎಂಬುದಿಲ್ಲ, ಆ ನಿಟ್ಟಿನಲ್ಲಿ ಪೌರ ಕಾರ್ಮಿಕರಿಗೆ ಗೌರವ ನೀಡುವುದು ಎಲ್ಲರ ಜವಾಬ್ದಾರಿ ಎಂದರು.

ಮಹಾಸಭಾ ಅಧ್ಯಕ್ಷೆ ಮಮತಾ ಪಾಟೀಲ್ ಅವರು ಮಾತನಾಡಿ, ಮಹಿಳೆ ಯಾವ ಸ್ತರದಲ್ಲಿ ಇದ್ದರು ಕೆಲಸ ಮತ್ತು ತನ್ನ ಸಂಸಾರವನ್ನು ಸರಿದೂಗಿಸಿಕೊಂಡು ಹೋಗುವ ಶಕ್ತಿ ಹೊಂದಿರುತ್ತಾಳೆ. ಆ ಶಕ್ತಿ ದುರುಪಯೋಗವಾಗಬಾರದು ಎಂದರು.

ಅರಳಿಕಟ್ಟೆ ಜೀರ್ಣೋದ್ಧಾರ ಸೇವಾ ಸಮಿತಿ ಕಾರ್ಯದರ್ಶಿ ರಾಜೇಗೌಡ, ಅಶೋಕ್ ಕುಮಾರ್, ರಂಗನಾಥ್, ದಿನೇಶ್ ಕುಮಾರ್, ಶೋಭಾ ಮಹೇಶ್, ಶೀಲಾ ವಿಶ್ವನಾಥ್, ಆಶಾ, ಧನಲಕ್ಷ್ಮಿ, ಇಂದಿರಾ, ನಾಗರತ್ನ, ರೋಟರಿ ಮಿಡ್ ಟೌನ್ ಅಧ್ಯಕ್ಷ ಸಿದ್ದೇಶ್ವರ ಹಾಗು ವಿನಯ್ ಪಾಲ್ಗೊಂಡಿದ್ದರು.

ಬೆಟ್ಟದ ಭೈರವೇಶ್ವರ ದೇಗುಲದಲ್ಲಿ ಚಿತ್ರೀಕರಣ ನಿಷೇಧಿಸಿ | ಗ್ರಾಮಸ್ಥರ ಒಕ್ಕೊರಲ ಆಗ್ರಹ

ಬಾಗಿಲು ಹಾಕಿ ಪೂಜೆ ಮಾಡುವ ಪರಿಸ್ಥಿತಿ ನಿರ್ಮಾಣ

• ಪ್ರಜೋದಯ ವರದಿ

ಸಕಲೇಶಪುರ: ಪ್ರಿ ವೆಡ್ಡಿಂಗ್ ಶೂಟ್ ಹೆಸರಿನಲ್ಲಿ ಬರುವ ಛಾಯಾಗ್ರಾಹಕರ ಉಪಟಳ ತಾಳಲಾರದೆ ಮುಂಬಾಗಿಲು ಹಾಕಿಕೊಂಡು ಪೂಜೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಾಲ್ಲೂಕಿನ ಕಾಲಭೈರವೇಶ್ವರ ದೇಗುಲದ ಅರ್ಚಕ ಸುಧೀರ್ ಭಟ್ ಅವರು ಅಸಹಾಯಕತೆ ವ್ಯಕ್ತಪಡಿಸಿದರು.

ದೇವಾಲಯದಲ್ಲಿ ಚಿತ್ರೀಕರಣ ನಿಷೇಧ ಹಾಗು ಸಿಸಿಟಿವಿ ಕ್ಯಾಮರಾ ಅಳವಡಿಸುವಂತೆ ಒತ್ತಾಯಿಸಿ ಹಿಂದೂಪರ ಸಂಘಟನೆ ಕಾರ್ಯಕರ್ತರು ಹಾಗು ಗ್ರಾಮಸ್ಥರು ಭಾನುವಾರ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ಮಾ. 27ರಂದು ನಡೆದ ಘಟನೆ ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ವಿವಾಹ ಪೂರ್ವ ಜೋಡಿಗಳನ್ನು ದೇವಾಲಯದ ಗೋಡೆಗೆ ಕಾಲು ತಾಗಿದ ರೀತಿಯಲ್ಲಿ ನಿಲ್ಲಿಸಿ ಫೋಟೊ ತೆಗೆಯುತ್ತಿದ್ದರು. ನಾನು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಛಾಯಾಗ್ರಾಹಕರಿಗೆ ಹಾಗೆ

ಮಾಡಬೇಡಿ ಅನಾಗರಿಕರಂತೆ ವರ್ತಿಸಬೇಡಿ ಎಂದು ಬುದ್ದಿ ಹೇಳಿ ನಂತರ ಪೂಜೆ ಮಾಡಲು ಹೊರಟಿದ್ದೆ. ಅದೇ ವೇಳೆ ಅಲ್ಲಿಗೆ ಬಂದ ಪ್ರಶಾಂತ್ (ಹಲ್ಲೆ ಆರೋಪಿ) ಹಾಗು ಕುಟುಂಬಸ್ಥರು ಸಹ, ಈಗ ತಾನೇ ಅರ್ಚಕರು ಅಷ್ಟೆಲ್ಲ ಹೇಳಿದ್ದಾರೆ, ಆದರೂ ಮಾತು ಕೇಳುವುದಿಲ್ಲ ನೀವು ಎಂದು ರೇಗಿದರು. ಅಷ್ಟಕ್ಕೆ ಛಾಯಾಗ್ರಾಹಕನೊಬ್ಬ ಏರುದನಿಯಲ್ಲಿ ಮಾತನಾಡಿದ. ಆ ದಿನ ದೇವಾಲಯದಲ್ಲಿ ಇಷ್ಟೇ ನಡೆಯಿತು ಎಂದು ಹೇಳಿದರು.

ಅವತ್ತು ನಾನು ಬರುವ ಮೊದಲೇ ಪ್ರಿ ವೆಡ್ಡಿಂಗ್ ಶೂಟ್‌ಗೆ ಬಂದಿದ್ದರು. ದೇವಸ್ಥಾನವೆಂದರೆ ನಮ್ಮ ಪಾಲಿಗೆ ಆರಾಧ್ಯ ಕ್ಷೇತ್ರ. ಛಾಯಾಗ್ರಾಹಕರಲ್ಲಿ ಒಬ್ಬರೂ ಸಹ ದೇವರಿಗೆ ಕೈ ಮುಗಿಯುವುದಿಲ್ಲ. ದೇವಸ್ಥಾನಕ್ಕೆ ಬರಲು ಯೋಗ ಹಾಗು ಯೋಗ್ಯತೆ ಎರಡೂ ಬೇಕು. ಅವರಿಗೆ ಯಾವುದೂ ಇರಲಿಲ್ಲ. ಚಪ್ಪಲಿ ಧರಿಸಿ, ಮಿಡಿ ಬಟ್ಟೆ ಹಾಕಬಾರದೆಂದು ಹೇಳಿದೆ. ಆದರೂ ನನ್ನ ಮಾತು ಕೇಳಲಿಲ್ಲ. ಬೇರೆ ಧರ್ಮದ ಪ್ರಾರ್ಥನಾ ಮಂದಿರಗಳಲ್ಲಿ ಹೀಗೆ ಮಾಡುತ್ತಾರಾ ಎಂದು ಪ್ರಶ್ನಿಸಿದರು.

» ನಾಲ್ಕನೇ ಪುಟದಲ್ಲಿ

ನಾಳೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ

ಬೆಟ್ಟದ ಭೈರವೇಶ್ವರಸ್ವಾಮಿ ದೇವಸ್ಥಾನದಲ್ಲಿ ಶುಕ್ರವಾರ ನಡೆದ ಘಟನೆ ತಾಲ್ಲೂಕಿನ ಎಲ್ಲಿಯೂ ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳುವ ಉದ್ದೇಶದಿಂದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾ. 31ರ ಮಂಗಳವಾರ ಹಾನುಬಾಳಿನ ಫೆಬಲ್ಸ್ ಅಂಡ್ ಬೀನ್ಸ್ ರೆಸಾರ್ಟ್‌ನಲ್ಲಿ ಅಧಿಕಾರಿಗಳ ಸಭೆ ನಡೆಸಲಿದ್ದಾರೆ.

ಕಂದಾಯ, ಜಿಲ್ಲಾ ಪಂಚಾಯಿತಿ, ಪೊಲೀಸ್, ಅರಣ್ಯ, ಪ್ರವಾಸೋದ್ಯಮ ಇಲಾಖೆಗಳು, ರೆಸಾರ್ಟ್, ಹೋಂ ಸ್ಟೇ ಸಂಘಗಳ ಸದಸ್ಯರು ಪಾಲ್ಗೊಳ್ಳಲಿದ್ದಾರೆ. ಸಭೆಗೂ ಮೊದಲು ಜಿಲ್ಲಾಧಿಕಾರಿ ಬೆಟ್ಟದ ಭೈರವೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ಪರಿಸ್ಥಿತಿ ಅರಿಯಲಿದ್ದಾರೆ.

ತೀರ್ಥಂಕರ ವರ್ಧಮಾನ ಮಹಾವೀರರ ಬದುಕು-ಚಿಂತನೆಗಳು

ತಿಲೋಏ ಸವ್ವಜೀವಾಣಂ ಹಿದ ಧಮ್ಮೋವದೇಸಿಣಂ
ವಡ್ಢಮಾಣಂ ಮಹಾವೀರಂ ವಂದೇಹಂ ಸವ್ವವೇದಿಣಂ ॥

ತಿಲೋಏ ಸವ್ವಜೀವಾಣಂ ಹಿದ ಧಮ್ಮೋವದೇಸಿಣಂ
ವಡ್ಢಮಾಣಂ ಮಹಾವೀರಂ ವಂದೇಹಂ ಸವ್ವವೇದಿಣಂ ॥

ಪ್ರಾಕೃತ ಭಾಷೆಯ ಈ ಮೇಲ್ಕಂಡ ಶ್ಲೋಕದ ಅರ್ಥವೆಂದರೆ ಮೂರು ಲೋಕದ ಎಲ್ಲಾ ಜೀವಿಗಳ ಹಿತಾಕಾಂಕ್ಷಿಯೂ, ಧರ್ಮೋಪದೇಶಕನೂ ಸರ್ವಜ್ಞನೂ ಆದ ವರ್ಧಮಾನ ಮಹಾವೀರನನ್ನು ನಾನು ವಂದಿಸುತ್ತೇನೆ. ಮಹಾವೀರನ ಮೂಲ ಹೆಸರು ವರ್ಧಮಾನ. ವಿದೇಹ ದೇಶದ ಲಿಚ್ಛವಿ ಗಣರಾಜ್ಯವು ಭಾರತದ ಅತಿ ಪ್ರಾಚೀನ ಸ್ವತಂತ್ರ ಗಣತಂತ್ರ ಪ್ರದೇಶವಾಗಿದೆ. ಈ ಪ್ರದೇಶವನ್ನು ಆಳುತ್ತಿದ್ದವನು ಚೇಟಕ ರಾಜ. ಚೇಟಕ ರಾಜನಿಗೆ ತ್ರಿಶಲಾ, ಮೃಗಾವತಿ, ಸುಪ್ರಭಾ, ಪ್ರಭಾವತಿ, ಚೇಳಿನಿ,ಜೇಷ್ಠಾ ಮತ್ತು ಚಂದನ ಎಂದು ಏಳು ಜನ ಪುತ್ರಿಯರು. ಇವರುಗಳಲ್ಲಿ ಹಿರಿಯ ಮಗಳು ತ್ರಿಶಲಾ. ತ್ರಿಶಲಾಳನ್ನು ಕುಂಡಲಪುರದ ರಾಜ ಸಿದ್ಧಾರ್ಥನಿಗೆ ವಿವಾಹ ಮಾಡಿಕೊಡ ಲಾಯಿತು. 598ರ ಸಿದ್ಧಾರ್ಥಿ ಸಂವತ್ಸರದ ಶುದ್ಧ ತ್ರಯೋದಶಿಯಂದು ನಂದ್ಯಾವರ್ತ ಅರಮನೆಯಲ್ಲಿ ತ್ರಿಶಲಾ ದೇವಿಯ ಪುತ್ರನ ಜನನವಾಯಿತು.

ನಂದ್ಯಾವರ್ತೋ ನಿವೇಶೋಸ್ಯ ಶಿಬಿರಸ್ಥಲ ಧೀಯಸಂ
ಪ್ರಾಸಾದೋ ವೈಜಯಂತಾಖ್ಯೋಯಃ ಸರ್ವತ್ರ ಸುಖಾವಹಃ ॥
ಆ. ಜಿನಸೇನ, ಆದಿಪುರಾಣ 33/147

ಆ ಸಂದರ್ಭದಲ್ಲಿ ಸುತ್ತಲ ಪ್ರದೇಶದಲ್ಲಿ ಶಾಂತಿ, ನೆಮ್ಮದಿ, ಅಭಿವೃದ್ಧಿಗಳು ಆಗಲಾರಂಭಿಸಿತು.ಇದೇ ಉದ್ದೇಶದಿಂದ ಮಾತಾಪಿತೃಗಳು ಜಿನ ಶಿಶುವಿಗೆ ವರ್ಧಮಾನ(ಅಂದರೆ ಯಾವಾಗಲೂ ವೃದ್ಧಿ ಹೊಂದುವ ಅಥವಾ ಹೊಂದಿಸುವವ) ಎಂದು ನಾಮಕರಣ ಮಾಡಿದರು.ಅಲ್ಲಿನ ರಾಜ ಹಾಗೂ ಪ್ರಜೆಗಳಾದಿಯಾಗಿ ರಾಜಕುಮಾರನ ಜನ್ಮೋತ್ಸವವನ್ನು ಆಚರಿಸಿದರು.

ವರ್ಧಮಾನರು ಬಾಲ್ಯಾವಸ್ಥೆಯಲ್ಲಿಯೇ ಮಹಾ ತೇಜಸ್ವಿಗಳು.ವರ್ಧಮಾನ ಗೆಳೆಯರೊಂದಿಗೆ ಆಲದ ಮರದ ಕೆಳಗೆ ಮರಕೋಂಬೆ ಆಟವಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಸಂಗಮದೇವನೆಂಬ ದೇವನು ವರ್ಧಮಾನನ ಧೈರ್ಯವನ್ನು ಪರೀಕ್ಷಿಸುವ ಸಲುವಾಗಿ ಮತ್ತು ಹೆದರಿಸಲು ಇಚ್ಛಿಸಿ, ಸರ್ಪಾಕಾರವನ್ನು ಧರಿಸಿ ಆಲದ ಮರದ ಬಳಿ ಬಂದನು.ಸರ್ಪವನ್ನು ನೋಡಿ ವರ್ಧಮಾನನ ಗೆಳೆಯರು ಕೆಲವರು ಓಡಿ ಹೋದರು.ಕೆಲವರು ಅಲ್ಲಿಯೇ ನಿಂತರು.ಬಾಲಕ ವರ್ಧಮಾನನು ಮೈಮೇಲೆ ಎರಗಿಬಂದ ಸರ್ಪವನ್ನು ಧೈರ್ಯದಿಂದ ಅದರ ಬಾಲವನ್ನು ಹಿಡಿದು ಬೇರೆ ಕಡೆಗೆ ಬಿಟ್ಟರು.

ವರ್ಧಮಾನನ ಮನೆಯ ವಾತಾವರಣವು ಬಹು ಶುದ್ದವೂ ಪವಿತ್ರವೂ ಆಗಿತ್ತು. ಮಾನವನ ಉನ್ನತಿಗೆ ಬೇಕಾಗುವ ಎಲ್ಲ ಸಾಧನ ಸಂಪತ್ತುಗಳೂ ಅಲ್ಲಿದ್ದವು. ಚಿಕ್ಕ ವಯಸ್ಸಿನಲ್ಲಿಯೇ ಜೀವಗಳ ಮೇಲೆ ದಯೆಯನ್ನು ಮಾಡುವುದು,ಕಳವು ಮಾಡದೆ ಇರುವುದು, ಬ್ರಹ್ಮಚರ್ಯದಿಂದಿರು ವುದು, ತನ್ನ ಆಕಾಂಕ್ಷೆಗಳನ್ನು ಮರ್ಯಾದೆಯಲ್ಲಿ ಇಟ್ಟುಕೊಳ್ಳುವುದು- ಇವುಗಳ ಬಗ್ಗೆ ದೃಢ ಸಂಕಲ್ಪ ವರ್ಧಮಾನನದು. ವರ್ಧಮಾನ ಬಾಲಕರಿಗೆ ಚಿಕ್ಕಂದಿನಿಂದಲೇ ಮತಿ, ಶ್ರುತ, ಅವಧಿಗಳೆಂಬ ಮೂರು ಸುಜ್ಞಾನಗಳು ಸಿದ್ಧಿಯಾಗಿತ್ತು.ಸಂಜಯ ವಿಜಯರೆಂಬ ಇಬ್ಬರು ಮುನಿಗಳು ತತ್ವದ ಸಂಶಯವು ಜಿನ ಬಾಲಕರಾದ ವರ್ಧಮಾನರನ್ನು ನೋಡುತ್ತಿದ್ದ ಹಾಗೆಯೇ ಅವರ ಸಂಶಯ ಪರಿಹಾರವಾಯಿತು.ಆಗ ಆ ಮುನಿಗಳು ಸಂತುಷ್ಟರಾಗಿ, ವರ್ಧಮಾನರಿಗೆ 'ಸನ್ಮತಿ' ಎಂಬ ಶುಭನಾಮವಿಟ್ಟರು. ಒಮ್ಮೆ ರಾಜಬೀದಿಯಲ್ಲಿ ಮದ್ದಾನೆಯೊಂದು ಧಾವಿಸಿ, ಬೀದಿಯಲ್ಲಿ ಓಡಾಡುತ್ತಿದ್ದವರನ್ನು, ಸಿಕ್ಕಸಿಕ್ಕವರನ್ನೆಲ್ಲ ತಿವಿಯುತ್ತ, ತುಳಿಯುತ್ತ ಸಂಚರಿಸುತ್ತಿದ್ದರು. ಜನರೆಲ್ಲ ಆನೆಯ ದಿಢೀರ್ ಹಾವಳಿಯಿಂದ ಭಯಭೀತರಾಗಿದ್ದರು. ಸುದ್ದಿ ತಿಳಿದ ವರ್ಧಮಾನನು ರಾಜಬೀದಿಗೆ ಬಂದು ಜನಜಂಗುಳಿಯಲ್ಲಿ ನುಸುಳಿ ಆನೆಯ ಸೊಂಡಿಲನ್ನು ಹಿಡಿದು, ಅದರ ಕುಂಭಸ್ಥಲವನ್ನು ಹತ್ತಿದನು. ನೋಡ ನೋಡುವಷ್ಟರಲ್ಲಿ ಆ ಮದ್ದಾನೆಯನ್ನು ಒಂದು ಸ್ಥಿಮಿತಕ್ಕೆ ತಂದನು.ಜನರೆಲ್ಲರು ಹರ್ಷಭರಿತರಾದರು. ಬೆರಗಿನಿಂದ ಓಹೋ ! ಮಹಾವೀರ ! ನಮ್ಮ ಮಹಾವೀರ !ಎಂದು ಹರ್ಷದಿಂದ ಉದ್ಗರಿಸಿದರು.ವರ್ಧಮಾನರು ಅಂದಿನಿಂದ ಮಹಾವೀರರಾಗಿ ಜಗತ್ಪ್ರಸಿದ್ಧಿಯನ್ನು ಪಡೆದರು. ಒಂದು ದಿನ ಇಳಿ ಹೊತ್ತಿನಲ್ಲಿ ವರ್ಧಮಾನನು ಸಿದ್ಧಾಲಯದಲ್ಲಿ ಆಗಮಗಳ ಅವಲೋಕನದಲ್ಲಿ ಮಗ್ನನಾಗಿದ್ದನು.

ಧಮ್ಮೋ ಮಂಗಲಮುಂಕ್ಕಿಟ್ಠಂ ಅಹಿಂಸಾ ಸಂಜಮೋ ತವೋ !'
ಅಹಿಂಸಾ, ಸಂಯಮ, ತಪಗಳಿಂದ ಕೂಡಿದ ಧರ್ಮವು ಸರ್ವಶ್ರೇಷ್ಠವೂ ಮಂಗಲವೂ ಆಗಿದೆ.
ಜರಾ ಮರಣವೇಗೇಣಂ, ವುಜ್ಜಮಾಣಾಣ ಪಾಣಿಣಂ
ಧಮ್ಮೋದೀವೋಪ ಇಟ್ಠಾಯ, ಗಈ ಸರಣಮುತ್ತಮಂ ॥

ಮುಪ್ಪುಮರಣಗಳೆಂಬ ವೇಗವುಳ್ಳ ಪ್ರವಾಹದಲ್ಲಿ ಮುಳುಗುತ್ತಿರುವ ಜೀವಿಗಳಿಗೆ ಧರ್ಮ ಒಂದೇ ಮಾತ್ರ ದ್ವೀಪ. ಪ್ರತಿಷ್ಠಾಗತಿ ಮತ್ತು ಉತ್ತಮ ಶರಣವಾಗಿದೆ.ಯಾವ ಹಗಲು-ರಾತ್ರಿಗಳು ಅತೀತದಲ್ಲಿ ಲಯವಾಗುತ್ತವೆಯೋ ಅವು ತಿರುಗಿ ಎಂದೋ ಬರುವುದಿಲ್ಲ, ಯಾವನು ಧರ್ಮವನ್ನು ಆಚರಿಸುತ್ತಾನೆಯೋ ಅವನ ಹಗಲಿರುಳುಗಳು ಸಫಲವಾಗುತ್ತವೆ.

ಜರಾ ಜಾವ ನ ಪೀಡೇಇ, ವಾಹೀ ಜಾವನ ವಡ್ಢ ಇ
ಜಾವಿಂಗಿಯಾ ನ ಹಾಯಂತಿ, ತಾವ ಧಮ್ಮ ಸಮಾಯರೆ ॥

ಎಲ್ಲಿಯವರೆಗೆ ಮುಪ್ಪು ಘಾಸಿಗೊಳಿಸುವುದಿಲ್ಲವೋ, ಎಲ್ಲಿಯ ತನಕ ಬೇನೆ-ಬೇಸರಿಕೆಗಳು ಬೆಳೆಯುವದಿಲ್ಲವೋ, ಎಲ್ಲಿಯವರೆಗೆ ಇಂದ್ರಿಯಗಳು ಶಕ್ತಿಹೀನ ವಾಗುದಿಲ್ಲವೋ, ಅಷ್ಟರಲ್ಲಿ ಧರ್ಮಾಚರಣೆಯನ್ನು ಮಾಡಲಿಕ್ಕೆ ಬೇಕು.ಆಮೇಲೆ ಏನೂ ಆಗದು.

ವರ್ಧಮಾನನಲ್ಲಿ ಒಂದರ ಹಿಂದೊಂದರಂತೆ ಧರ್ಮದ ಈ ವಿಚಾರಗಳು ಸುಳಿಯುತ್ತಿದ್ದವು. ಅದರಲ್ಲಿಯೇ ಮಗ್ನನಾಗಿದ್ದನು.ಜೈನಾಗಮಗಳಲ್ಲಿ ಬರುವ ಉಲ್ಲೇಗಳನ್ನು ಗಮನಿಸಿದರೆ, ವರ್ಧಮಾನನ ಪರೋಪಕಾರ ವೃತ್ತಿಯ ಪ್ರಸಿದ್ಧಿಯು ಬಹುದೂರ ದೂರ ದೇಶಗಳಲ್ಲಿ ಪಸರಿಸಿದ್ದಿತೆಂದು ತಿಳಿಯುತ್ತದೆ.ಅನೇಕ ರಾಜ ಸಭೆಗಳಲ್ಲಿ, ಸಾಮ್ರಾಟರ ಆಸ್ಥಾನ ಒಡ್ಡೋಲಗಗಳಲ್ಲಿ ವರ್ಧಮಾನನ ವೀರತ್ವ, ದಯಾಭಾವಗಳ ಸಂಕೀರ್ತನೆಯು ನಡೆಯುತ್ತಿದ್ದಿತು. ಮಹಾವೀರನು ಹಗಲಿರುಳೂ ಲೋಕ ಹಿತದ ಚಿಂತನೆಯಲ್ಲಿಯೇ ಮಗ್ನನಾಗಿದ್ದನು. ಜೀವನದ ರಹಸ್ಯ ತತ್ವಶೋಧ, ಸತ್ಯಾನುಭವಗಳಲ್ಲಿ ಮುಳುಗಿದ್ದನು. ಆದ್ದರಿಂದ 'ಸತ್ಯ'ದ ಪ್ರತ್ಯಕ್ಷ ದರ್ಶನವನ್ನೂ ಹೊಂದಿದನು.ಅವನು ತನ್ನ ಜೀವನದ ಆದರ್ಶ ಹಾಗೂ ಮಹತ್ವವನ್ನೂ ಮನದಲ್ಲಿ ರೂಪಿಸಿಕೊಂಡನು.ಆನಂದದ ಕೇಂದ್ರವು ಆತ್ಮವೆ ಎಂದು ನಿಶ್ಚಯಿಸಿ ಉಪಾಸನೆಯನ್ನು ಮಾಡಲು ಆತುರನಾಗತೊಡಗಿದನು.

ವರ್ಧಮಾನನ ಅಂತಃಕರಣದಲ್ಲಿ ಕೆಳಗಿನ ವಿಚಾರ ಮಂಥನ ನಡೆಯಿತು.
ಚತ್ತಾರಿ ಪರಮಂಗಾಣಿ ದುಲ್ಲಹಾಣೀಹ ಜನ್ತುಣೋ ಮಾಣುಸತ್ತಂ ಸು ಈ ಸದ್ಧಾ, ಸಂಜಮಮ್ಮಿಯ ಮೀರಿಯಂ ॥

ಮಾನವತೆ, ಧರ್ಮಶ್ರಮಣ, ಶ್ರದ್ಧೆ ಮತ್ತು ಸಂಯಮಾಚರಣೆಗಳು ಇವು ನಾಲ್ಕು ಜೀವನ ವಿಕಾಸದ ಶ್ರೇಷ್ಠ ಸಾಧನೆಗಳಾಗಿವೆ.

ಆತ್ಮಕಲ್ಯಾಣದ ವಿವೇಕವು ತಟ್ಟನೆ ಒಂದೆರಡು ದಿನಗಳಲ್ಲಿ ಲಭಿಸುವಂತಹದಲ್ಲ. ಅದಕ್ಕಾಗಿ ದೀರ್ಘಕಾಲದವರೆಗೆ ಬಹುವಿಧ ಉಪಾಯಗಳನ್ನು ಯೋಜಿಸಲಿಕ್ಕೇ ಬೇಕು. ಮಹರ್ಷಿ ಪದವನ್ನು ಹೊಮದುವ ಪೂರ್ವದಲ್ಲಿ ಸಂಯಮಧರ್ಮವನ್ನು ದೃಢತೆಯಿಂದ ಬಹುಕಾಲದವರೆಗೆ ಆಚರಿಸ ಬೇಕಾಗುತ್ತದೆ.ನಮ್ಮ ಆತ್ಮವನ್ನು ಪಾಪಗಳಿಂದ ಸಂರಕ್ಷಿಸಿಕೊಳ್ಳುತ್ತ ಯಾವಾಗಲೂ ಅಪ್ರಮಾದಿ ಗಳಾಗಿ ಬಾಳಬೇಕು.

ಆತ್ಮನು ತನ್ನ ಸುಖ-ದುಖಃಗಳ ಕರ್ತೃವೂ ಭೋಕ್ತವೂ ಆಗಿದ್ದಾನೆ. ಸನ್ಮಾರ್ಗವು ಆತ್ಮನು ಮಿತ್ರನು.ನಿಜವಾಗಿಯೂ ಇದು ಕಠಿಣವಾಗಿದೆ. ದುರ್ಮಾರ್ಗವು ಆತ್ಮನ ಶತ್ರುವು. ತನ್ನನ್ನು ತಾನೇ ದಮನ ಮಾಡಿಕೊಳ್ಳಲಿಕ್ಕೇಬೇಕು. ಇಹಪರಲೋಕ ಗಳಲ್ಲಿ ಸುಖಿಯಾಗುತ್ತಾನೆ.

ಯಾವ ವೀರನು ಘೋರ ಸಂಗ್ರಾಮದಲ್ಲಿ ಸಹಸ್ರಾವಧಿ ಯೋಧರನ್ನು ಗೆಲ್ಲುತ್ತಾನೆಯೋ, ಅಂತಹವನು ತನ್ನ ಒಂದು ಆತ್ಮವನ್ನು ಗೆದ್ದರೆ ಸಾಕು. ಅದು ಅವನ ಸರ್ವ ಶ್ರೇಷ್ಠ ವಿಜಯವಾಗುತ್ತದೆ.ತನ್ನ ಆತ್ಮನೊಡನೆಯೇ ಹೋರಾಡಲಿಕ್ಕೆ ಬೇಕು. ಹೊರಗಿನ ಸ್ಥೂಲ ಶತ್ರುಗಳ ಕೂಡ ಯುದ್ಧ ಮಾಡುವುದರಲ್ಲಿ ಏನು ಲಾಭವಿದೆ? ಆತ್ಮನಿಂದ ಆತ್ಮನನ್ನು ಗೆಲ್ಲುವವನೇ ಪೂರ್ಣ ಸುಖಿಯಾ ಗಿರುತ್ತಾನೆ. ರಾಗ-ದ್ವೇಷಗಳೆರಡೂ ಕರ್ಮದ ಬೀಜಗಳಾಗಿವೆ. ಹಾಗೆಯೇ ಮೋಹವೂ ಕೂಡ ಕರ್ಮದ ಉತ್ಪಾದಕವೆನಿಸಿದೆ. ಸಂಸಾರದಲ್ಲಿ ಜನ್ಮ-ಮರಣಗಳ ಮೂಲವು ಕರ್ಮವಾಗಿದೆ.ಜನ್ಮ ಮರಣಗಳಂತೂ ದುಃಖಕರವಾಗಿವೆ.

ಯಾರಿಗೆ ಮೋಹವಿಲ್ಲವೋ ಅವರಿಗೆ ದುಖಃವಿಲ್ಲ ಯಾರಿಗೆ ತೃಷ್ಣೆಯಿಲ್ಲವೋ ಅವರಿಗೆ ಮೋಹವಿಲ್ಲ ಯಾರಿಗೆ ಲೋಭವಿಲ್ಲವೋ ಅವರಿಗೆ ತೃಷ್ಣೆಯು ಇಲ್ಲ. ಯಾರ ಹತ್ತಿರ ಲೋಭ ಮಾಡುವಂಥ ಪದಾರ್ಥವಿಲ್ಲವೋ ಅವರಿಗೆ ಲೋಭವೂ ಸಹ ಇಲ್ಲ. ಅಂದ ಮೇಲೆ ಈ ಕಾಮ, ಮೋಹ, ಲೋಭಗಳಿಗೆಲ್ಲ ಮೂಲವಾದ ಈ ಸಂಸಾರದಲ್ಲಿ ಸಿಕ್ಕು ಏಕೆ ಒದ್ದಾಡಬೇಕು?ಮುಂದಿನ ಸಂಸಾರದ ಆರಂಭವು ಈ ಲಗ್ನದಿಂದಲೇ ಆಗುವುದಿದೆ. ಆದ್ದರಿಂದ ಈಗಲೇ ಎಚ್ಚರಗೊಳ್ಳುವುದು ವಿಹಿತವಾಗಿದೆ.ಲೋಕಕಲ್ಯಾಣಕ್ಕಾಗಿಯೂ, ಆತ್ಮಕಲ್ಯಾಣಕ್ಕಾಗಿಯೂ ಅವಿವಾಹಿತನಾಗಿರುವುದೇ ಉತ್ತಮ ಉಪಾಯವಾಗಿದೆ. ಪ್ರಸಂತ ಬಂದಾಗ ಇದನ್ನೇ ತಂದೆ-ತಾಯಂದಿರಿಗೆ ಸ್ಪಷ್ಟವಾಗಿ, ಆದರೂ ಅವರ ಮನಸ್ಸು ನೋಯದಂತೆ ತಿಳಿಹೇಳಿದರಾಯಿತು- ಎಂದು ವರ್ಧಮಾನನು ಒಂದು ನಿರ್ಧಾರಕ್ಕೆ ಬಂದಿದ್ದನು.

ವರ್ಧಮಾನರಿಗೆ ತಾನೇ ತಾನಾಗಿ ವೈರಾಗ್ಯ ಉಂಟಾಯಿತು. ಅವರ ವೈರಾಗ್ಯ ಹುಟ್ಟಲು ಯಾವ ಬಾಹ್ಯ ಕಾರಣ ಇರಲಿಲ್ಲ.. ಪೂರ್ವಭವದಲ್ಲಿ ಅವರು ಸಂಯಮದಿಂದಿದ್ದು ತೀರ್ಥಂಕರ ಪುಣ್ಯನಾಮ ಕರ್ಮಬಂಧ ಮಾಡಿಕೊಂಡಾಗ ಆದ ಭಾವವು ಅವರಿಗೆ ಸ್ಮರಣೆಯಾಯಿತು.

ವರ್ಧಮಾನರಿಗೆ ಕಲಿಂಗ ರಾಜನಾದ ಜಿತಶತ್ರು ರಾಜನು ತನ್ನ ಪುತ್ರಿಯಾದ ಯಶೋಧಳನ್ನು ಲಗ್ನ ಮಾಡಿಕೊಳ್ಳಲು ಪತ್ರ ಕಳುಹಿಸಿದನು. ಸಿದ್ಧಾರ್ಥರಾಜನು ಜಿತಶತ್ರುವಿನ ಕೋರಿಕೆಯನ್ನು ವರ್ಧಮಾನರ ಮುಂದಿಟ್ಟನು. ವರ್ಧಮಾನರು ನನಗೆ ಲಗ್ನ ಬೇಕಿಲ್ಲ, ನನ್ನ ನಶ್ವರ ಶರೀರವನ್ನು ಅಮರತ್ವವನ್ನು ಪಡೆಯುವ ಸಾಧನೆಗಾಗಿ ಉಪಯೋಗಿಸುವೆನು.ನನ್ನ ಆತ್ಮ ಕಲ್ಯಾಣವನ್ನು ಮಾಡಿಕೊಂಡು ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವೆನು ಎಂದು ಉತ್ತರವಿತ್ತರು. ಯುವಕ ವರ್ಧಮಾನನು ದೀಕ್ಷಾ ಗ್ರಹಣದ ಮೊದಲೇ ತನ್ನ ಸಂಪತ್ತನ್ನೆಲ್ಲ ಬಡ-ಬಗ್ಗರಿಗೆ ದಾನ ಮಾಡಿಬಿಟ್ಟಿದ್ದನು. ದೀಕ್ಷಾಗ್ರಹಣದ ವರ್ಧಮಾನನ ಈ ಪೂರ್ವ ಸಿದ್ಧತೆಯನ್ನು ನಿಶ್ಚಯವನ್ನೂ ತಿಳಿದು, ಅವನನ್ನು ಅನೇಕರು ಅಭಿನಂದಿಸಿದರು.ಅನೇಕ ಗಣರಾಜರೂ ಈ ದೀಕ್ಷಾ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದರು.ಕುಂಡಲ ಗ್ರಾಮದಲ್ಲಿ ಅದೊಂದು ಅಪೂರ್ವ ಉತ್ಸವದ ಸಮಯವೇ ಆಯಿತು. ಹಳ್ಳಿ-ಹಳ್ಳಿಗಳಿಂದ ಜನ ಸಮೂಹವು ಧಾವಿಸಿ, ರಾಜಧಾನಿಗೆ ಬಂದಿತು. ವರ್ಧಮಾನರು ತಮ್ಮ 28ನೇ ವರ್ಷ 7 ನೇ ತಿಂಗಳು 12 ನೇ ದಿವಸದಲ್ಲಿ ಅಂದರೆ ಕ್ರಿ.ಪೂ. 569 ನೇ ಮಾರ್ಗಶಿರ ಕೃಷ್ಣಪಕ್ಷ ದಶಮಿ ಸೋಮವಾರ ಮುನಿ ದೀಕ್ಷೆಯನ್ನು ಸ್ವೀಕರಿಸಿದರು.ಅವರ ದಿಗಂಬರ ಸಾದುಗಳಾಗಿ ತಪಶ್ಚರ್ಯೆಯಲ್ಲಿ 'ದಿಕ್ ಅಂಬರ ಹಾಗೂ ತರುತಲವಾಸಲದಲ್ಲಿ ತಲ್ಲೀನರಾದರು. ಎರಡು ದಿನದ ತಪಶ್ಚರ್ಯೆಯ ನಂತರ ಬಕುಲ ಗ್ರಾಮದ ರಾಜನ ಅರಮನೆಯಲ್ಲಿ ಪ್ರಪ್ರಥಮ ಆಹಾರದಾನ ಸ್ವೀಕರಿಸಿದರು.ವೈಶಾಲೀ ನಗರದಿಂದ ಹೊರಟ ವರ್ಧಮಾನ ಮಹಾವೀರ ಮುನಿಗಳು ಹನ್ನೆರಡು ವರ್ಷಗಳ ಕಾಲ ಘೋರ ತಪಸ್ಸು ಮಾಡಿದರು.ಅನೇಕ ಉಪಸರ್ಗಗಳ ಪ್ರಸಂಗಗಳನ್ನು ಅತ್ಯಂತ ಶಾಂತ ಚಿತ್ತದಿಂದ ದೂರ ಮಾಡಿದರು. ಮಹಾಮುನಿ ವರ್ಧಮಾನರಿಗೆ ಕ್ರಿ.ಪೂ.557ನೇ ಏಪ್ರಿಲ್ 26ನೇ ವೈಶಾಖ ಶುದ್ದ ದಶಮಿ ಶುಭ ಭಾನುವಾರ ಋಜುಕೂಲಾನದಿಯ ದಡದಲ್ಲಿ ಕೇವಲ ಜ್ಞಾನ ಪ್ರಾಪ್ತಿಯಾಯಿತು. ಕೇವಲ ಜ್ಞಾನ ಪ್ರಾಪ್ತವಾದ ಮೇಲೆ ಮಹಾವೀರಸ್ವಾಮಿಯವರು ಶ್ರೀವಿಹಾರ ಮಾಡಿದರು. ಭಗವಾನ್ ಮಹಾವೀರರ ವಿಹಾರವೆಂದರೆ, ಧರ್ಮಸಭೆಯ ಅನಾವರಣ. ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ ಈ ಚತುರ್ವಿಧ ಸಂಘಗಳು ಭಗವಾನ್ ಮಹಾವೀರರ ಅನುಯಾ ಯಿಗಳಾಗಿದ್ದರು. ಚತುರ್ವಿಧ ಸಂಘಗಳು ಸುವ್ಯವಸ್ಥಿತವಾಗಿ ನಡೆಯಲು ವಿವಿಧ ಗಣಗಳಲ್ಲಿ ಸಂಘಗಳನ್ನು ವಿಭಾಗಿಸಲಾಗಿತ್ತು. ಆ ಗಣಗಳ ಮುಖಂಡರಿಗೆ ಗಣಧರರೆಂದು ಹೆಸರು. ಭಗವಾನ್ ಮಹಾವೀರರಿಗೆ ಹನ್ನೊಂದು ಜನ ಗಣಧರರಿದ್ದರು.ಈ ಗಣಧರರ ನೇತೃತ್ವದಲ್ಲಿ ಒಟ್ಟು ಹದಿನಾಲ್ಕು ಸಾವಿರ ಶಿಷ್ಯ ಸಮೂಹವನ್ನು ಒಳಗೊಂಡಿತ್ತು. ಮೂವತ್ತು ಸಾವಿರ ಆರ್ಯಿಕೆಯರಿಂದ ಕೂಡಿದ ಸ್ತ್ರೀಯರ ಸಾಧ್ವಿ ಸಂಘವಿತ್ತು. ಲಕ್ಷಾಂತರ ಶ್ರಾವಕ-ಶ್ರಾವಿಕೆಯರು ಮಹಾವೀರರನ್ನು ಅನುಸರಿಸುತ್ತಿದ್ದರು.ಮೂವತ್ತು ವರ್ಷಗಳ ದೀರ್ಘಾವಧಿ ವಿಹಾರಕಾಲದಲ್ಲಿ ವೈಶಾಲಿ, ರಾಜಗೃಹ, ನಾಲಂದ, ಮಿಥಿಲಾ ಶ್ರಾವಸ್ತಿ, ಮಗಧ, ಅಂಗ, ವಂಗ ದೇಶಗಳನ್ನು ಒಳ ಗೊಂಡಂತೆ ಮಧ್ಯ, ಪೂರ್ವ, ಉತ್ತರ ಭಾರತದಲ್ಲಿ ಭಗವಾನ್ ಮಹಾವೀರರ ಧರ್ಮಸಭೆಗಳು ಜರುಗಿದವು.ಭಗವಾನ್ ಮಹಾವೀರರ ಉಪ ದೇಶಗಳು ಅಂದಿನ ಜನಸಾಮಾನ್ಯರ ಆಡು ಭಾಷೆಯಾದ ಅರ್ಧ ಮಾಗಧಿ ಪ್ರಾಕೃತ ವಾಗಿತ್ತು.

ಭಗವಾನ್ ಮಹಾವೀರರ ಚಿಂತನೆಯು ವಿಶ್ವಕ್ಕೇ ಸಾರ್ವಕಾಲಿಕ ಮತ್ತು ಸಾರ್ವ ತ್ರಿಕವಾದದ್ದು. ಅವರು ರೂಪಿಸಿದ ಆತ್ಮತತ್ವ, ಆತ್ಮನಿಗೂ ಕರ್ಮಕ್ಕೂ ಇದ್ದ ಸಂಬಂಧ, ವ್ರತಗಳ ಮತ್ತು ದಶಧರ್ಮಗಳ ಆಚರಣೆಯಿಂದ ಕಷಾಯ ಗಳನ್ನು ಗೆದ್ದು, ಮನುಷ್ಯನು ಜೀವನದ ಉದ್ಧಾರ ಹೇಗೆ ಮಾಡಿಕೊಳ್ಳಬಹುದು ಈ ಎಲ್ಲಾ ವಿಚಾರಗಳು ಈ ಕೆಳಕಂಡ ಅವರ ಕೆಲವು ಸೂಕ್ತಿಗಳಿಂದ ನಿರೂಪಿತವಾಗುತ್ತವೆ.

ಅವು ಇಂತಿವೆ

1.ಮಾನವ ಜನ್ಮ ದೊರೆಯುವುದು ಅತಿ ದುರ್ಲಭ ವಾಗಿದೆ ದೊರೆತರೂ ಕಾಲದ ನಂತರ ದೊರೆಯ ಬಹುದು ಕಾರಣ, ಅದು ದೊರೆತಾಗ ಸಂಸಾರ ಸಾಗರ ದಿಂದದ ಪಾರಾಗಲು ಯತ್ನಿಸುವುದು ಶ್ರೇಯಸ್ಕರ ಮಾರ್ಗವಾಗಿದೆ.
2.ಮನುಷ್ಯ ಜನ್ಮದಲ್ಲಿ ಆರೋಗ್ಯ, ಆಯುಷ್ಯ, ಬಲ, ಸಂಪತ್ತು ಇವೆಲ್ಲ ಅಸ್ಥಿರವಾದವುಗಳು; ಆದರೆ ಅವು ದೊರೆತಾಗ, ಅವುಗಳನ್ನು ಒಳ್ಳೆ ರೀತಿಯಿಂದ ಉಪ ಯೋಗ ಮಾಡಿಕೊಂಡು ಪರರಿಗೆ ಹಿತವಾಗುವಂತೆ ಉಪಕಾರಕ ಕಾರ್ಯಗಳಲ್ಲಿ ನಿರತರಾಗುವುದು ಶ್ರೇಯಸ್ಕರ ಜೀವನವಾಗಿದೆ.
3.ಜನ್ಮದಿಂದ ಯಾರೂ ಕೀಳಲ್ಲ, ಗುಣಗಳಿಂದ ಎಲ್ಲರೂ ತಮ್ಮ ಕಲ್ಯಾಣ ಸಾಧಿಸಿಕೊಳ್ಳಬಹುದು. ಮನುಷ್ಯನು ತನ್ನ ಗುಣದಿಂದಲೇ ಪೂಜ್ಯನಾಗುತ್ತಾನೆ. ವಂಶದ ಮೂಲಕವಲ್ಲ.
4.ಜೀವನು (ಆತ್ಮನು) ಒಂದು ಪದಾರ್ಥ, ಅದಕ್ಕೆ ರೂಪವಿಲ್ಲ, ಪ್ರಾಪ್ತವಾದ ಶರೀರವನ್ನು ತುಂಬುತ್ತದೆ. ಅದು ನಿತ್ಯವಾದುದು, ಚೈತನ್ಯವು ಅದರ ಲಕ್ಷಣವಾ ಗಿದೆ. ಅದು ಕರ್ತೃತ್ವ ಶಕ್ತಿಯುಳ್ಳದ್ದು, ಎಲ್ಲಾ ವಸ್ತು ಗಳನ್ನು ತಿಳಿಯುವ ಜ್ಞಾನ ಉಳ್ಳದ್ದು ಮತ್ತು ತಾನು ಮಾಡಿದ್ದರ ಫಲವನ್ನು ಅನುಭವಿಸುತ್ತದೆ.
5.ಜ್ಞಾನ, ದರ್ಶನ, ಚಾರಿತ್ರ, ತಪ, ವೀರ್ಯ ಮತ್ತು ಉಪಯೋಗ ಇವೆಲ್ಲವು ಆತ್ಮನ ಲಕ್ಷಣಗಳು.
6.ಪರಿಶುದ್ಧ ಪರಿಪೂರ್ಣ ಆತ್ಮನೇ ಪರಮಾತ್ಮನು.
7.ಆತ್ಮನನ್ನು ಜಯಿಸಿದವನೇ ನಿಜವಾದ ಶೂರನು.
8.ಕರ್ಮಗಳಿಂದ ಮುಕ್ತನಾದ ಆತ್ಮನೇ ಪರಮಾತ್ಮನು.
9.ರಾಗದಿಂದ ಜೀವನಿಗೆ ಕರ್ಮ ಬಂಧವಾಗುತ್ತದೆ.
10.ರಾಗದಿಂದ ಮುಕ್ತನಾದವನು ಆತ್ಮನನ್ನು ಅರಿಯುತ್ತಾನೆ.
11.ಮೋಹದಿಂದ ಪಾಪ ಸಂಚಯವಾಗುತ್ತದೆ.
12.ಮೋಹವನ್ನು ಗೆದ್ದರೆ ಸರಳತೆ ಉಂಟಾಗುತ್ತದೆ.
13.ರಾಗದ್ವೇಷಗಳು ಕರ್ಮದ ಬೀಜಗಳು: ಕರ್ಮವೇ ಜನನ-ಮರಣಗಳ ಮೂಲ.
14.ಕ್ರೋಧವು ಸುಖಶಾಂತಿಗಳ ವೈರಿಯಾಗಿದೆ.
15.ಲೋಭವು ಸರ್ವನಾಶಕ್ಕೆ ಕಾರಣವಾಗುತ್ತದೆ. ಲೋಭವನ್ನು ಗೆಲಿದ ಜೀವನಿಗೆ ಸುಖಸಂತೋಷಗಳು ಲಭಿಸುತ್ತವೆ.
16.ಅಹಿಂಸೆಯೇ ದಯೆಯ ತಾಯಿ.
17.ಮುನಿಯಾಗಲಿ, ಗೃಹಸ್ಥನಾಗಲಿ. ವಿವೇಕಿಯಾದ ವನು ನಿರ್ಮಲ ಮನಸ್ಸಿನಿಂದ ಪ್ರಾಣಿಗಳಿಗೆ ದಯೆ ತೋರಿಸಿದರೆ,ಆತ್ಮಕಲ್ಯಾಣವನ್ನು ಮಾಡಿಕೊಳ್ಳುತ್ತಾನೆ.
18.ಸತ್ಯವು ಸಿದ್ಧಿಯ ಸೋಪಾನವಾಗಿದೆ.
19.ಬ್ರಹ್ಮಚರ್ಯವು ಉತ್ತಮ ತಪ, ಸಂಯಮ, ವಿನಯ, ಜ್ಞಾನ, ಚಾರಿತ್ರ ಮತ್ತು ಸಮ್ಯಕ್ತ್ವಗಳ ಮೂಲವಾಗಿದೆ.
20.ಬ್ರಹ್ಮಚರ್ಯವು ಮೋಕ್ಷದ ಏಣಿ ಇದ್ದಂತೆ ಎಂದು ತಿಳಿಯಬೇಕು.
21.ವಸ್ತುಗಳ ಮಮತ್ವವೇ ಪರಿಗ್ರಹ. ಪರಿಗ್ರಹವು ದುಃಖಕ್ಕೆ ಕಾರಣ. ಅ ಸಂತೋಷ ಅಥವಾ ಅವಿಶ್ವಾಸ ವನ್ನು ಹುಟ್ಟಿಸುತ್ತದೆ. ಹಿಂಸಾಚಾರವೇ ಅದರ ಫಲ. ಕಾರಣ ಪರಿಗ್ರಹವನ್ನು ನಿಯಂತ್ರಿಸುವುದೇ ಲೇಸು.
22.ಪರಿಗ್ರಹಗಳಿಂದ ನಿರ್ಲಿಪ್ತನಾದರೆ ಮೋಕ್ಷ ಮಾರ್ಗವು ಕಾಣಿಸುತ್ತದೆ.
23.ದೇವಪೂಜೆ, ಗುರುಸೇವೆ, ಸ್ವಾಧ್ಯಾಯ, ಸಂಯಮ, ತಪ, ದಾನ ಈ ಆರು ಕರ್ಮಗಳನ್ನು ದಿನಾಲು ಮಾಡುತ್ತಿರಬೇಕು.
24.ಪಂಚಅಣುವ್ರತ ಪಾಲನೆಯು ದೈನಿಕ ಜೀವನದ ಉಸಿರಾಗಬೇಕು.
25.ಆಹಾರ, ಔಷಧ, ಶಾಸ್ತ್ರ ಮತ್ತು ಅಭಯ ಈ ನಾಲ್ಕು ದಾನಗಳನ್ನು ಮಾಡುತ್ತಿರಬೇಕು.
26.ಸಮ್ಯಗ್‌ದರ್ಶನ, ಜ್ಞಾನ, ಚಾರಿತ್ರ ಮತ್ತು ತಪ ಇವುಗಳ ಮಾರ್ಗದಲ್ಲಿ ನಡೆಯುವ ವ್ಯಕ್ತಿಯು ಸದ್ಗತಿ ಪಡೆಯುತ್ತಾನೆ.
27.ರಾಗದ್ವೇಷಗಳನ್ನು ಬಿಟ್ಟು ಶಾಂತನಾಗಿ ಕರ್ಮ ಗಳನ್ನು ಜಯಿಸುವುದೇ ಮುಕ್ತಿಮಾರ್ಗ.
28.ಅನೇಕಾಂತ ತತ್ವದಂತೆ ಪ್ರತಿಯೊಂದು ವಸ್ತುವು, ನಿತ್ಯ-ಅನಿತ್ಯ, ಸದೃಶ-ಅಸದೃಶ, ವಾಚ್ಯ-ಅವಾಚ್ಯ, ಸತ್-ಅಸತ್ ರೂಪಗಳಲ್ಲಿ ಪ್ರತಿಪಾದಿಸಲ್ಪಡುತ್ತವೆ.
29.ಎಲ್ಲ ನಯಗಳನ್ನು ತಿಳಿದು ಅನೇಕಾಂತ ತತ್ವದ ಸಹಾಯದಿಂದ ಪರಸ್ಪರ ವಿರೋಧ ಭಾವನೆಗಳನ್ನು ಸಹ ಸಮನ್ವಯಗೊಳಿಸಲು ಸಾಧ್ಯವಾಗುತ್ತದೆ.
30.ಮಹಾವೀರರು ನಡೆದು ಬಂದ ದಾರಿಯೇ ಮೋಕ್ಷಮಾರ್ಗ.

ಭಗವಾನ್ ಮಹಾವೀರರು ಆಗಾಗ ಸಂಘವನ್ನು ತನ್ನ ಈ ಕೆಳಗಿನ ಉಪದೇಶದಿಂದ ಜಾಗೃತಗೊಳಿಸುತ್ತಿದ್ದನು. ಅನೇಕ ಪ್ರಕಾರದ ವಿಘ್ನಗಳಿಂದ ಕೂಡಿದುದೂ ಅಲ್ಪ ಆಯುಷ್ಯ ಇರುವಂಥದೂ ಆದ ಈ ಮಾನವ ಜೀವನದಲ್ಲಿ ಪೂರ್ವ ಸಂಚಿತ ಕರ್ಮದ ಧೂಳನ್ನು ಪೂರ್ಣ ಕಳೆದುಕೊಳ್ಳುವುದಕ್ಕಾಗಿ ಒಂದು ಕ್ಷಣಮಾತ್ರವೂ ಕೂಡ ಪ್ರಮಾದವನ್ನು ಎಸಗಬೇಡ, ಬಹಳಷ್ಟು ಪ್ರಮಾದ ಗಳುಳ್ಳ ಜೀವವು ತನ್ನ ಶುಭಾ-ಶುಭಾ ಕರ್ಮಗಳಿಗೆ ವಶವಾಗಿ, ಅನೇಕ ಸಲ ಭವಚಕ್ರದಲ್ಲಿ ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಸುತ್ತುತ್ತಲಿದೆ. ಆದ್ದರಿಂದ ಸ್ವಲ್ಪವೂ ಪ್ರಮಾದವನ್ನು ಮಾಡಬಾರದು.

ಭಗವಂತ ಮಹಾವೀರನ ವಿಚಾರ ಆಚಾರ ಪದ್ಧತಿ ಗಳನ್ನು ಅಂದಿನ ಅನೇಕ ರಾಜ ಮಹಾರಾಜರು ಸ್ವೀಕರಿಸಿದರು. ಜನತೆಯೂ ಸ್ವೀಕರಿಸಿದರು. ಅದರಿಂದ ಭಾರತದಲ್ಲಿ ಒಂದು ಜೈನ ಸಮಾಜವೇ ರೂಪುಗೊಂಡಿತು. ಅದು ಕಾಲಕ್ರಮದಲ್ಲಿ ದಿಗಂಬರ, ಶ್ವೇತಾಂಬರ, ಸ್ಥಾನಕಪಾಸಿ ಹೀಗೆ ಇತ್ಯಾದಿ ವಿವಿಧ ಬೇಧಗಳಲ್ಲಿ ವಿಭಾಗಹೊಂದಿರಬಹುದು.ಆದರೆ ಅವುಗಳಲ್ಲದರ ಧ್ಯೇಯವು ಒಂದೇ. ಅದು ಆತ್ಮ ಸ್ವಾತಂತ್ರ್ಯ ಸಂಪಾದನೆ. ಈ ಸಿದ್ಧಿಯ ಸಾಧನೆಗಾಗಿ ಭಾರತದಲ್ಲಿ ಜೈನ ಪರಂಪರೆಯಿಂದ ಮೂರ್ತಿ ಶಿಲ್ಪ ಬೆಳೆಯಿತು. ಮಂದಿರಗಳು ರೂಪುಗೊಂಡವು. ತೀರ್ಥಕ್ಷೇತ್ರಗಳು ನಿರ್ಮಾಣವಾದವು. ಅದರಿಂದ ತ್ಯಾಗ, ಸಂಯಮ, ಶೀಲಯುತ ಅಹಿಂಸಾ ಜೀವನವನ್ನು ರೂಪಿಸಿಕೊಳ್ಳುವ ದಿನಚರ್ಯೆಯು ಜೈನಸಮಾಜದಲ್ಲಿ ಪ್ರಚುರಗೊಂಡಿದೆ. ಕನ್ನಡದಲ್ಲಿ ಭಗವಾನ್ ಮಹಾವೀರ ಕುರಿತಪ್ರಥಮ ಮಾಹಿತಿ ಇರುವ ಕೃತಿಯೆಂದರೆ ಕ್ರಿ.ಶ. 978 ರಲ್ಲಿ ಚಾವುಂಡರಾಯ ರಚಿಸಿದ ಚಾವುಂಡರಾಯ ಪುರಾಣ ವೆಂಬ ಗದ್ಯ ಗ್ರಂಥವೇ ಮೊದಲನೆಯದು.ಅನಂತರ ಆಚಣ್ಣ, ಅಗ್ಗಳ ಇನ್ನಿತರ ಪ್ರಾಚೀನ ಕನ್ನಡ ಜೈನ ಕವಿ ಗಳು ವಿವಿಧ ಕಾಲಘಟ್ಟಗಳಲ್ಲಿ ತೀರ್ಥಂಕರ ವರ್ಧ ಮಾನ ಪುರಾಣವನ್ನು ಕನ್ನಡ ಭಾಷೆಯಲ್ಲಿ ರಚಿಸಿದ್ದಾರೆ. ಭಗವಾನ್ ಮಹಾವೀರ ತೀರ್ಥಂಕರರ ಚತುರ್ವಿಧ ಸಂಘ ತನ್ನ ಚಾರಿತ್ರ್ಯ ವ್ಯವಸ್ಥೆ, ಧರ್ಮಪರಾಯಣತೆ, ಲೋಕಕಲ್ಯಾಣಕಾರಿ ಗುಣಗಳಿಂದ ಪ್ರಸಿದ್ಧವಾಗಿತ್ತು. ಜೈನ ಸಮಾಜವು ತನ್ನ ವಿಶಿಷ್ಟ ಗುಣಗಳಿಂದ ಈಗಲೂ ಕೂಡ ಭಾರತದಲ್ಲಿ ಒಂದು ಜೀವಂತ ಸಮಾಜವೆನಿಸಿ ಬಾಳಿದೆ. ರಾಷ್ಟ್ರೀಯ ದೃಷ್ಟಿ, ಆತ್ಮಕಲ್ಯಾಣ, ತ್ಯಾಗ ಜೀವನ, ದಾನಗುಣ, ಸಚ್ಚಾರಿತ್ರ್ಯಗಳಿಗೆ ಹೆಸರಾಗಿದೆ.

-ಡಾ.ವೃಷಭಕುಮಾರ್, ಉಪನ್ಯಾಸಕರು
ರಾಷ್ಟ್ರೀಯ ಪ್ರಾಕೃತ ಅಧ್ಯಯನ ಸಂಶೋಧನಾ ಸಂಸ್ಥೆ
ಶ್ರವಣಬೆಳಗೊಳ.

ವ್ಯಕ್ತಿತ್ವದೋಷದ ಖಾಯಿಲೆಗಳು

ಒಬ್ಬ ಆರೋಗ್ಯಕರ ಹಾಗು ಒಳ್ಳೆಯ ವ್ಯಕ್ತಿತ್ವವಿರುವ ವ್ಯಕ್ತಿ ತಾನೂ ಕ್ಷೇಮವಾಗಿ ಇತರರೂ ಕ್ಷೇಮವಾಗಿರಲು ಬಯಸಿ ಅದರಂತೆ ಕಾರ್ಯ ನಿರ್ವಹಿಸಿ, ಬದುಕಿನಲ್ಲಿ ಸ್ವಾವಲಂಬಿಯಾಗಿ, ಸಮಾಜಕ್ಕೆ ಉಪಯುಕ್ತವಾಗಿ ಬಹುತೇಕ ಜನರೊಡನೆ ಹೊಂದಿಕೊಂಡು ಪ್ರಗತಿಯೆಡೆಗೆ ಸಾಗುತ್ತಾನೆ. ವ್ಯಕ್ತಿತ್ವದ ವಿಕಾಸ ಹುಟ್ಟುವ ಮೊದಲೆ ಪ್ರಾರಂಭವಾಗಿ (ಜೀನ್ಸ್‌ಗಳ ಪ್ರಭಾವದಿಂದ) ಹುಟ್ಟಿದ ಮೇಲೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಬೆಳೆಯುತ್ತದೆ.

ವಿವಿಧ ವ್ಯಕ್ತಿತ್ವ ಸಿದ್ಧಾಂತಿಗಳು ತಮ್ಮ ಸೈದ್ಧಾಂತಿಕ ನಿಲುವನ್ನುಆಧರಿಸಿ ವ್ಯಕ್ತಿತ್ವದ ಬಗ್ಗೆ ತಮ್ಮ ವ್ಯಾಖ್ಯಾನ ಮಂಡಿಸುತ್ತಾರೆ. ಮನೋವಿಶ್ಲೇಷಣಾ ಸಿದ್ಧಾಂತದ ಪ್ರತಿಪಾದಕ ಸಿಗ್ಮಂಡ್ ಫ್ರಾಯ್ಡ್ ಹಾಗು ಎರಿಕ್‌ಸನ್ ರಂತಹ ಮನೋ ವಿಜ್ಞಾನಿಗಳು ವ್ಯಕ್ತಿತ್ವ ಸಿದ್ಧಾಂತಗಳನ್ನು ಪ್ರಸ್ತಾಪಿಸಲು ಪ್ರಯತ್ನಿಸಿದ್ದಾರೆ. ಶರೀರದ ಹೊರ ರೂಪ, ಉಡುಗೆ-ತೊಡುಗೆ, ಜ್ಞಾನ, ತಿಳವಳಿಕೆ, ಧೋರಣೆ, ಬುದ್ಧಿಚಾತುರ್ಯ, ಭಾವನೆಗಳನ್ನು ಪ್ರಕಟಿಸುವ ರೀತಿ, ಸ್ವಾರ್ಥ ಹಾಗು ಪರಹಿತಕ್ಕೆ ಕೊಡುವ ಆದ್ಯತೆ, ನೈತಿಕ ಮೌಲ್ಯಗಳು, ಯಾವುದೇ ಸನ್ನಿವೇಶಕ್ಕೆ ಸಂದರ್ಭಕ್ಕೆ ಪ್ರಕಟವಾಗುವ ಪ್ರತಿಕ್ರಿ ಯೆಗಳು, ಜೀವನದ ಗುರಿ-ಉದ್ದೇಶಗಳೆಲ್ಲವೂ ಸೇರಿ ವ್ಯಕ್ತಿತ್ವ ಎನಿಸಿಕೊಳ್ಳುತ್ತದೆ. ಪ್ರತಿಯೊಬ್ಬ ಮನುಷ್ಯನ ವ್ಯಕ್ತಿತ್ವದ ಗುಣಲಕ್ಷಣಗಳು ಅವನ ಆಲೋಚನೆ, ಭಾವನೆ, ವರ್ತನೆಗಳ ಮೇಲೆ ನಿರ್ಧಾರಿತವಾಗಿರುತ್ತದೆ.

ಒಬ್ಬ ಆರೋಗ್ಯಕರ ಹಾಗು ಒಳ್ಳೆಯ ವ್ಯಕ್ತಿತ್ವವಿರುವ ವ್ಯಕ್ತಿ ತಾನೂ ಕ್ಷೇಮವಾಗಿ ಇತರರೂ ಕ್ಷೇಮವಾಗಿರಲು ಬಯಸಿ ಅದರಂತೆ ಕಾರ್ಯ ನಿರ್ವಹಿಸಿ, ಬದುಕಿನಲ್ಲಿ ಸ್ವಾವಲಂಬಿಯಾಗಿ, ಸಮಾಜಕ್ಕೆ ಉಪಯುಕ್ತವಾಗಿ ಬಹುತೇಕ ಜನರೊಡನೆ ಹೊಂದಿಕೊಂಡು ಪ್ರಗತಿಯೆಡೆಗೆ ಸಾಗುತ್ತಾನೆ. ವ್ಯಕ್ತಿತ್ವದ ವಿಕಾಸ ಹುಟ್ಟುವ ಮೊದಲೆ ಪ್ರಾರಂಭವಾಗಿ (ಜೀನ್ಸ್‌ಗಳ ಪ್ರಭಾವದಿಂದ) ಹುಟ್ಟಿದ ಮೇಲೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಬೆಳೆಯುತ್ತದೆ. ಅನು ವಂಶೀಯತೆ, ತಂದೆ-ತಾಯಿಯ ಪಾಲನೆ-ಪೋಷಣೆ, ಕುಟುಂಬದ ಪರಿಸರ, ನೆರೆಹೊರೆ, ಶಾಲೆಯ ಶಿಕ್ಷಣ, ಸಹಪಾಠಿಗಳು, ಆಗಿಂದಾಗೆ ಘಟಿಸುವ ಘಟನೆಗಳೂ, ಅನಾರೋಗ್ಯ, ಆರ್ಥಿಕ ಪರಿಸ್ಥಿತಿ, ವ್ಯಕ್ತಿತ್ವ ವಿಕಾಸದ ಮೇಲೆ ಪರಿಣಾಮಬೀರುತ್ತಲೇ ಇರುತ್ತವೆ.

ಕೆಲವರಲ್ಲಿ ಈ ವ್ಯಕ್ತಿತ್ವ ವಿಕಸನ ಸರಿಯಾಗಿ ನಡೆಯದೆ ಅನೇಕ ನ್ಯೂನತೆ, ಕೊರತೆಗಳು ಸೇರಿಕೊಂಡು ವ್ಯಕ್ತಿತ್ವ ದೋಷ ಉಂಟಾಗುತ್ತದೆ. ಇದರಿಂದ ವ್ಯಕ್ತಿಯೂ, ಮನೆಯವರೂ, ಸಮಾಜವೂ ಅನೇಕ ಕಷ್ಟ, ನಷ್ಟ, ನೋವುಗಳಿಗೆ ತುತ್ತಾಗ ಬೇಕಾಗುತ್ತದೆ.

ವ್ಯಕ್ತಿತ್ವ ದೋಷಗಳು

ಸಂಶಯ ಪೀಡಿತ ವ್ಯಕ್ತಿತ್ವ ಯಾರಲ್ಲೂ ನಂಬಿಕೆ, ವಿಶ್ವಾಸಗಳಿಲ್ಲದೆ, ಇತರರು ತನ್ನ ಹಿತಕ್ಕೆ, ಕ್ಷೇಮಕ್ಕೆ ವಿರುದ್ದವಾಗಿದ್ದಾರೆ, ತನಗೆ ಕೆಟ್ಟದ್ದನ್ನು ಮಾಡಲು, ಹಾನಿಯುಂಟು ಮಾಡಲು ಸಿದ್ದರಿ ದ್ದಾರೆ. ತನಗೆ, ತನ್ನ ಸೋದರ, ಸೋದರಿ, ಗಂಡ ಅಥವಾ ಹೆಂಡತಿ, ಸ್ನೇಹಿತರು, ಸಹೋ ದ್ಯೋಗಿಗಳು ಪ್ರಾಮಾಣಿಕರಾಗಿಲ್ಲ, ನಿಷ್ಠರಾಗಿಲ್ಲ, ಮೋಸ ವಂಚನೆ, ಮಾಡಲು ಪ್ರಯತ್ನಿಸು ತಿದ್ದಾರೆ ಎಂಬ ಅನುಮಾನ ಸಂಶಯ ಪೀಡಿತ ವ್ಯಕ್ತಿಗಳ ವ್ಯಕ್ತಿತ್ವದ ಒಂದು ಭಾಗವಾಗಿ



ಬಿಡುತ್ತದೆ. ತಾನೇ ಸರಿ, ತಾನು ಮಾಡುವುದೇ ಸರಿ, ಇತರರು ಸರಿಯಾಗಿಲ್ಲ ಎಂಬ ಧೋರಣೆಯ ಜೊತೆಗೆ ಜಿಗುಟುತನ ಇರುತ್ತದೆ. ಇಂತಹವರು ಯಾವುದೇ ರೀತಿಯ ಬದಲಾವಣೆ ಇಷ್ಟಪಡು ವುದಿಲ್ಲ.

ಅತಿ ಅಚ್ಚುಕಟ್ಟುತನ

ಎಲ್ಲವೂ ಪರಿಪೂರ್ಣವಾಗಿರಬೇಕು. ಪ್ರತಿಯೊಂದೂ ಅಚ್ಚುಕಟ್ಟಾಗಿರಬೇಕು, ಸಮಯ ಪಾಲನೆ ಸರಿಯಾಗಿ ಮಾಡಬೇಕು. ಏನು ಕೆಲಸ ಮಾಡಿದರೂ ಅದು ಎ-ಒನ್ ಆಗಿರಬೇಕು, ಪ್ರತಿಯೊಂದು ವಸ್ತು ಎಲ್ಲಿರಬೇಕೋ ಅಲ್ಲಿರಬೇಕು, ವ್ಯವಸ್ಥಿತವಾಗಿರಬೇಕು. ಸ್ವಲ್ಪವೂ ಕೂಡ ಹೆಚ್ಚು ಕಡಿಮೆಯಾಗಬಾರದು, ಎಲ್ಲಿಯೂ ಕಸ-ಕಡ್ಡಿ ಕೊಳಕಿರಬಾರದು ಪ್ರತಿಶತ ನೂರರಷ್ಟು ಶಿಸ್ತು ಇರಬೇಕೆಂದು ಬಯಸುವುದರ ಜೊತೆಗೆ ತಮ್ಮೊಡನೆ ಇತರರೂ ಹಾಗೆಯೆ ನಡೆದು ಕೊಳ್ಳಬೇಕೆಂದು ನಿರೀಕ್ಷಿಸುತ್ತಾರೆ. ಹಾಗೊಂದು ವೇಳೆ ತಾವು ಅಂದುಕೊಂಡಂತೆ ಇಲ್ಲದಿದ್ದರೆ ಅಥವಾ ಆಗದಿದ್ದರೆ ಬಹಳ ವಿಚಲಿತರಾಗುತ್ತಾರೆ.ಇದು ಒಂದು ಮಿತಿಯಲ್ಲಿದ್ದರೆ ಚೆನ್ನ, ಆದರೆ ಮಿತಿಮೀರಿದಾಗ ಎಲ್ಲರೂ ತೊಂದರೆ ಅನುಭವಿಸುತ್ತಾರೆ.

ಉನ್ಮಾದ ವ್ಯಕ್ತಿತ್ವ

ಅತಿಯಾದ ಭಾವೋದ್ವೇಗ, ನಾಟಕೀಯತೆ, ಇತರರ ಗಮನವನ್ನು ತನ್ನೆಡೆಗೆ ಸೆಳೆಯುವ ನಡವಳಿಕೆ. ಶ್ರಮ ಪಡಲು ತಯಾರಿಲ್ಲದ ಮನಃಸ್ಥಿತಿ. ವಿಫಲತೆಗೆ ಹಾಗು ನಿರಾಶೆಗೆ ತೀವ್ರವಾಗಿ ಪರಿತಪಿಸುವುದು. ಅದಕ್ಕಾಗಿ ಇತರರನ್ನು ದೂಷಿಸುವುದು, ಸಂಬಂಧಗಳಲ್ಲಿ ಗಂಭೀರತೆ ಇಲ್ಲದಿ ರುವುದು ಮತ್ತು ಹುಡುಗಾಟಿಕೆಯ ಪ್ರವೃತ್ತಿ ಹೆಚ್ಚು ಕಂಡುಬರುತ್ತದೆ.

ಸಾಮಾಜಿಕ ಸನ್ನಿವೇಶಗಳಲ್ಲಿ ಅತಿಯಾದ ಆತಂಕ

ಆದಷ್ಟು ಜನರೊಂದಿಗೆ ಬೆರೆಯುವುದನ್ನು ತಪ್ಪಿಸಿಕೊಳ್ಳುವ ತವಕ, ಜನರ ನಡುವೆ ಇರುವಾಗ ಏನೋ ಮುಜುಗರ, ಸಂಕೋಚ, ಸಭೆ-ಸಮಾರಂಭಗಳಲ್ಲಿ ಭಾಗವಹಿಸಲು ನಿರಾಕರಣೆ. ಈ ವ್ಯಕ್ತಿತ್ವದ ಪ್ರಮುಖ ಲಕ್ಷಣಗಳು.

ಸಮಾಜ ವಿರೋಧಿ ವ್ಯಕ್ತಿತ್ವ

ಅತಿಯಾದ ಸ್ವಾರ್ಥತನ, ಇದಕ್ಕಾಗಿ ನೀತಿ-ನಿಯಮಗಳನ್ನು, ಮೌಲ್ಯಗಳನ್ನು ಬಿಡಲು ಸದಾ ಸಿದ್ಧರಿರುತ್ತಾರೆ. ಬೇರೆಯವರ ಯೋಗ ಕ್ಷೇಮದ ಬಗ್ಗೆ ನಿರ್ಲಕ್ಷ್ಯ ಮನೋಭಾವ. ಮೋಸ, ವಂಚನೆ, ಅಪರಾಧ ಮಾಡಲು ಹಿಂಜರಿಯುವುದಿಲ್ಲ. ತನ್ನ ಬೇಕು-ಬೇಡಗಳ ಬಗ್ಗೆಯೆ ಸದಾ ಮಗ್ನತೆ, ಸುಖಪಡುವುದೇ ಇವರ ಗುರಿ. ಇಂತಹವರು ಅಪರಾಧ ಜಗತ್ತಿನೊಳಗೆ ಪ್ರವೇಶ ಪಡೆದರೆ ಎಂತಹ ಹೀನವಾದ ಅಪರಾಧ ಮಾಡಲೂ ಸಿದ್ಧರಿರುತ್ತಾರೆ. ತಪ್ಪಿತಸ್ಥ ಭಾವನೆಯಾಗಲಿ, ಪಾಪಪ್ರಜ್ಞೆಯಾಗಲಿ ಇರುವುದಿಲ್ಲ, ಶಿಕ್ಷೆಯಿಂದ ಪಾಠ ಕಲಿಯುವುದಿಲ್ಲ ಬದಲಾಗಿ ಮಾಡಿದ ತಪ್ಪನ್ನೆ ಮತ್ತೆ ಮಾಡಲು ತಯಾರಿರುತ್ತಾರೆ.

ಗಡಿ ರೇಖೆಯ ವ್ಯಕ್ತಿತ್ವ ದೋಷ (ಬಾರ್ಡರ್ ಲೈನ್ ಪರ್ಸನಾಲಟಿಡಿಸಾರ್ಡರ್)

ಸದಾ ಒಂಟಿತನ. ಆಗೊಮ್ಮೆ ಈಗೊಮ್ಮೆ ಆತ್ಮಹತ್ಯಾ ಹಾಗು ಹಿಂಸಾಚಾರ ಪ್ರಯತ್ನ. ವಿಚಿತ್ರವಾಗಿ ವರ್ತಿಸುವುದು, ಅಲ್ಪಾವಧಿಗೆ ಅಸಂಬದ್ಧ ನಡೆ-ನುಡಿಗಳನ್ನು ವ್ಯಕ್ತಪಡಿಸುವುದು. ಹತಾಶೆ ಅಥವಾ ನಿರಾಶೆಗಳನ್ನು ನಿಭಾಯಿಸುವ ಮಾನಸಿಕ ಶಕ್ತಿ ಹಾಗು ಚತುರತೆ ಇಲ್ಲದಿರುವುದು, ಸಂಬಂಧಗಳನ್ನು ಉಳಿಸಿಕೊಳ್ಳಲು ವಿಫಲವಾಗುವುದು. ಬಹುಬೇಗ ಭಾವೋದ್ವೇಗಕ್ಕೆ ಒಳಗಾ ಗುವುದು. ತನ್ನ ಬಗ್ಗೆ ಕೀಳರಿಮೆ, ತನ್ನ ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳಲಾಗದೆ ತಾನೂ ಹಿಂಸೆ ಪಟ್ಟುಇತರರಿಗೂ ಹಿಂಸೆ ನೀಡುವುದು, ಹಿಂದೆ ಮುಂದೆ ನೋಡದೆ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸದೆ, ಚಿಂತಿಸದೆ ದುಡುಕಿನ ನಿರ್ಧಾರ ತೆಗೆದುಕೊಳ್ಳುವುದು ಇತ್ಯಾದಿಗಳು ಈ ವ್ಯಕ್ತಿತ್ವದೋಷದಮುಖ್ಯಲಕ್ಷಣಗಳು.

ಆಕ್ರಮಣಕಾರಿ ವ್ಯಕ್ತಿತ್ವ. ಅತಿಅಲ್ಪವಾದ ಸೋಲಿಗೂ ಅತಿಯಾದ ನಿರಾಶೆ, ವಿಪರೀತ ಸಿಟ್ಟು, ಕೋಪ ಪ್ರಕಟಿಸುವುದು, ಮನೆಯವರ ಮೇಲೆ ಇತರರ ಮೇಲೆ, ಆಕ್ರಮಣ ಮಾಡುವುದು, ಜಗಳ ಹಾಗು ಹಿಂಸಾಚಾರಕ್ಕೆ ಇಳಿಯುವುದು, ಇವರಲ್ಲಿ ಕಂಡುಬರುವ ಪ್ರವೃತ್ತಿ, ಇವರಿಗೆ ತಮ್ಮನಿರಾಶೆ, ಅತೃಪ್ತಿಗಳನ್ನುಸರಿಯಾಗಿನಿಭಾಯಿಸಲಾಗುವುದಿಲ್ಲ.

ಪರಾವಲಂಬನೆಯ ವ್ಯಕ್ತಿತ್ವ

ಎಲ್ಲದಕ್ಕೂ ಇತರರನ್ನು ಅವಲಂಬಿಸುವುದು, ಸ್ವಂತವಾಗಿ ಏನನ್ನೂ ಮಾಡಲಾರರು, ಬುದ್ಧಿ, ವಿವೇಚನೆ ಇದ್ದರೂ ಅದನ್ನು ಬಳಸಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾರರು, ಯಾವುದೇ ನಿರ್ಧಾರ ಅಥವಾ ತೀರ್ಮಾನ ಸಣ್ಣದಾಗಿರಲಿ, ದೊಡ್ಡದಾಗಿರಲಿ ಬೇರೆಯವರ ಸಲಹೆ, ಸೂಚನೆ ಯಂತೆಯೇ ನಡೆಯಲಿಚ್ಛಿಸುತ್ತಾರೆ. ಪ್ರೌಢ ವಯಸ್ಸಿನವರೆಗೆ ತಂದೆ, ತಾಯಿ ಹಾಗು ಮನೆ ಯವರ ಮೇಲೆ ಅವಲಂಬನೆ, ಮದುವೆಯಾದ ಮೇಲೆ ಜೀವನ ಸಂಗಾತಿಯ ಮೇಲೆ ಅವ ಲಂಬನೆ. ತಾನು ಮಾಡಿದ್ದು ಸರಿಹೋಯಿತೆ, ತಾನು ತೆಗೆದುಕೊಂಡ ನಿರ್ಧಾರ ಒಳ್ಳೆಯದೆ ಎಂದು ಇತರರನ್ನು ಕೇಳುತ್ತಲೇ ಇರುತ್ತಾರೆ. ಬೇರೆಯವರಿಗೆ ತನ್ನಿಂದಾಗುವುದಿಲ್ಲ ಎಂದು ಹೇಳಲು ಸಂಕೋಚ ಅಥವಾ ನೀವು ಮಾಡಿದ್ದು ಸರಿಯಿಲ್ಲ ಎಂದು ಹೇಳಲು ಹೆದರಿಕೆ. ಒಂಟಿಯಾಗಿರಲು ಭಯ, ಎಲ್ಲರೂ ತನ್ನನ್ನು ದೂರ ಮಾಡಿಬಿಡುತ್ತಾರೇನೋ, ತನ್ನ ನೆರವಿಗೆ ಯಾರೂ ಬರುವುದಿಲ್ಲವೇನೋ ಎಂಬ ಆತಂಕ ಇವರಲ್ಲಿ ಯಾವಾಗಲೂ ಇರುತ್ತದೆ.

ಸ್ಕಿಜಾಯಿಡ್ ವ್ಯಕ್ತಿತ್ವ

ಸದಾತಾನಾಯಿತು, ತನ್ನ ಪಾಡಾಯಿತು, ಎಲ್ಲ ಸಮಯದಲ್ಲಿಯೂ ಒಂಟಿಯಾಗೇ ಇರಲು ಇಚ್ಛಿಸುವುದು, ಯಾರೊಂದಿಗೂ ಮುಕ್ತವಾಗಿ ಮಾತನಾಡಲು, ಆಳವಾದ ಸಂಬಂಧ ಇಟ್ಟುಕೊಳ್ಳಲು ಬಯಸುವುದಿಲ್ಲ. ತನ್ನ ಅನಿಸಿಕೆ, ಅನುಭವ, ಭಾವನೆಗಳನ್ನು, ಆಸೆ-ಆಕಾಂಕ್ಷೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದಿಲ್ಲ. ಒಂಟಿಯಾಗೆ ಮಾಡಬಲ್ಲ ಕೆಲಸ ಹಾಗು ಹವ್ಯಾಸಗಳಲ್ಲಿ ಮಗ್ನರಾಗಿರುತ್ತಾರೆ. ಹೊಗಳಿಕೆಗೆ, ತೆಗಳಿಕೆಗೆ ಒಂದು ಬಗೆಯ ನಿರ್ಲಿಪ್ತತೆಇರುತ್ತದೆ. ಭಾವೋದ್ವೇಗ ಉಂಟು ಮಾಡುವ ಸನ್ನಿವೇಶಗಳಲ್ಲಿಯೂ ತಣ್ಣಗಿರುತ್ತಾರೆ. ಜೀವನ ಸಂಗಾತಿಯೂ ಸೇರಿದಂತೆಎಲ್ಲರ ಪಾಲಿಗೂ ಈತಅಥವಾ ಈಕೆ ಮುಚ್ಚಿದ ಪುಸ್ತಕ! ಒಳಗೇನಿದೆ ಯಾರಿಗೂ ತಿಳಿಯುವುದಿಲ್ಲ.

ಸ್ಕಿಜೊಟೈಪಲ್ ವ್ಯಕ್ತಿತ್ವ

ಇತರರು ತನ್ನ ಬಗ್ಗೆ ಮಾತನಾಡಿಕೊಳ್ಳಬಹುದು, ಆಡಿಕೊಳ್ಳಬಹುದೆನ್ನುವ ಅನುಮಾನ, ಬಹಳ ಮೂಢ ನಂಬಿಕೆ, ಅಂಧಶ್ರದ್ದೆ, ಎಲ್ಲ ರೀತಿಯ ಶಕುನಗಳಲ್ಲಿಯೂ ಅತಿಯಾದ ನಂಬಿಕೆ, ಅತಿರಮ್ಯ, ಭೀಕರ ಕಲ್ಪನೆಗಳನ್ನು ಮಾಡಿಕೊಂಡು ಸಂತೋಷ ಪಡುವುದು ಅಥವಾ ಭಯ ಪಡುವುದು. ಇತರರಿಗೆ ಅರ್ಥವಾಗದ ವಿಚಾರಗಳನ್ನು ಮಾತನಾಡುವುದು. ಮಾತು ಮತ್ತು ವರ್ತನೆಗಳಲ್ಲಿ ಸಂಶಯ ಪ್ರವೃತ್ತಿ, ಕೆಲವು ಸನ್ನಿವೇಶ ಸಂದರ್ಭಗಳಿಗೆ ವ್ಯತಿರಿಕ್ತವಾದ ಭಾವನೆ ಗಳನ್ನು ವ್ಯಕ್ತಪಡಿಸುವುದು. ಆಪ್ತರಾಗಲಿ, ಆತ್ಮಿಯ ಸ್ನೇಹಿತರಾಗಲಿ ಇರುವುದಿಲ್ಲ. ಇವರಿಗೆ ವಿಚಿತ್ರ ವ್ಯಕ್ತಿ ಎಂಬ ಹಣೆಪಟ್ಟಿ.

ಈ ರೀತಿಯ ವ್ಯಕ್ತಿತ್ವ ದೋಷಪೂರಿತ ವರ್ತನೆಗಳಿಗೆ ನಿರ್ದಿಷ್ಟ ಕಾರಣಗಳಿಲ್ಲ. ಹಲವು ಅಂಶಗಳು ಸೇರಿ ಈ ಬಗೆಯ ದೋಷಪೂರಿತ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಅನುವಂಶೀಯತೆ, ಮೆದುಳಿಗೆ ಸಣ್ಣ ಪ್ರಮಾಣದ ಹಾನಿ, ತಂದೆ-ತಾಯಿಯ ಪೋಷಕರ ಲಾಲನೆ-ಪಾಲನೆಯಲ್ಲಿ ದೋಷ, ಅತಿಮುದ್ದು, ಅಥವಾ ಅತಿ ಶಿಕ್ಷೆ, ಅತಿಯಾದ ತಿರಸ್ಕಾರದ ವಾತಾವರಣ ಹಾಗು ಶ್ಲಾಘನೆ, ಮೆಚ್ಚುಗೆ ಇಲ್ಲದಿರುವುದು, ರೀತಿ ನೀತಿಗಳನ್ನು ಕಲಿಸದಿರುವುದು, ಕುಟುಂಬದ ಇತರ ಸದಸ್ಯರಲ್ಲಿ ನೈತಿಕ ಮೌಲ್ಯಗಳು, ಶಿಸ್ತು-ಸಂಯಮ ಇಲ್ಲದಿರುವುದು, ಯೋಗ್ಯ ಶಿಕ್ಷಣ ದೊರೆ ಯದಿರುವುದು. ಕೆಟ್ಟ ಮಾದರಿ ಹಾಕಿಕೊಡುವ ಮಾಧ್ಯಮಗಳು, ಸಮಾಜದ ನೈತಿಕ ಮೌಲ್ಯ ವಿಲ್ಲದ ನಾಯಕರ ಮಾರ್ಗದರ್ಶನ ಹೀಗೆ ಹಲವು ಕಾರಣಗಳಿಂದ ವ್ಯಕ್ತಿತ್ವ ಬೆಳವಣಿಗೆಯಲ್ಲಿ ವ್ಯತ್ಯಯ ಉಂಟಾಗಿ ವ್ಯಕ್ತಿಯು ವ್ಯಕ್ತಿತ್ವ ದೋಷದ ಕಾಯಿಲೆಯಿಂದ ಬಳಲುವಂತಾಗುತ್ತಾನೆ.

ಚಿಕಿತ್ಸೆ

ಮನೋಚಿಕಿತ್ಸೆ, ಆಪ್ತ ಸಲಹೆ, ಮಾರ್ಗದರ್ಶನ ಮತ್ತು ವರ್ತನಾ ಚಿಕಿತ್ಸೆಗಳ ಮೂಲಕ ನಡವಳಿಕೆಯಲ್ಲಿ ಸುಧಾರಣೆ ಮಾಡಬಹುದು. ಜೊತೆಗೆ ವ್ಯಕ್ತಿಯ ಮನವೊಲಿಕೆ, ವ್ಯಕ್ತಿತ್ವದಲ್ಲಿ ರುವ ದೋಷಗಳನ್ನು ಸರಿಪಡಿಸಿಕೊಳ್ಳಲು ಒತ್ತಾಯ. ಆತ ಅಥವಾ ಆಕೆಯನ್ನು ದೂಷಿಸದೆ ಬದಲಾಗಲು ಪ್ರೋತ್ಸಾಹಿಸಬೇಕು. ಮನೆಯವರು ಬಂಧು ಮಿತ್ರರು, ಸಹೋದ್ಯೋಗಿಗಳೂ ಒಟ್ಟಾಗಿ ಈ ಬದಲಾವಣೆಗೆ ಬೇಕಾದ ಪರಿಸರ ಮತ್ತು ಅವಕಾಶಗಳನ್ನು ಸೃಷ್ಟಿಸಬೇಕು. ವ್ಯಕ್ತಿ ಸಮಸ್ಯಾತ್ಮಕ ಮತ್ತು ಅಸಹಜ ಧೋರಣೆ ಮತ್ತು ವರ್ತನೆಗಳನ್ನು ತೋರಿಸದಂತೆ ಒತ್ತಾಸೆ ನೀಡಬೇಕು. ಬಹುಮಾನ, ಶ್ಲಾಘನೆ, ಶಿಸ್ತು, ಶಿಕ್ಷೆಗಳನ್ನು ಹದವಾಗಿ ಬೆರೆಸಿ ತರಬೇತಿ ನೀಡಬೇಕು. ಅಗತ್ಯಬಿದ್ದರೆ ಆಹ್ಲಾದಕರ ವಾತಾವರಣದಲ್ಲಿ ಸುಂದರ ಪರಿಸರದಲ್ಲಿಟ್ಟು ಅಗತ್ಯವಾದ ಬದಲಾ ವಣೆಗಳನ್ನು, ಸುಧಾರಣೆಗಳನ್ನು ತರಬೇಕು. ಈ ಬದಲಾವಣೆಯ ಕಾಲದಲ್ಲಿ ವ್ಯಕ್ತಿಗೆ ಪ್ರೀತಿ, ಸಹಾನುಭೂತಿಯೂ ಬೇಕು. ಹಾಗೆಯೆ ಕಠಿಣವಾದ ರೀತಿಯಲ್ಲಿ ಹೀಗೆ ಮಾಡು ಹಾಗೆ ಮಾಡು ಹೀಗೆ ಮಾಡಬೇಡ ಹಾಗೆ ಮಾಡಿದರೆ ಪರಿಣಾಮ ಚೆನ್ನಾಗಿರುವುದಿಲ್ಲ ಎಂದು ಹೇಳಿ ಅವರ ದೋಷಪೂರಿತ ನಡವಳಿಕೆಯ ನಿಯಂತ್ರಣವೂ ಬೇಕು.

-ಎನ್.ಆರ್.ಪ್ರಶಾಂತ್
ಆಪ್ತ ಸಲಹಾ ಮನಃಶಾಸ್ತ್ರಜ್ಞ
ಮೊ.ನಂ. 9481545719

ರಹಾನೆ, ರಘುವಂಶಿ ಸ್ಫೋಟಕ ಬ್ಯಾಟಿಂಗ್

ಮುಂಬೈ ಗೆಲುವಿಗೆ ದಾಖಲೆಯ ಗುರಿ ನೀಡಿದ ಕೋಲ್ಕತ್ತಾ ನೈಟ್ ರೈಡರ್ಸ್

• ಪ್ರಜೋದಯ ವರದಿ

ಮುಂಬೈ: ಇಲ್ಲಿನ ವಾಂಖೆಡೆ ಮೈದಾನದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ನಡೆಯುತ್ತಿರುವ ಐಪಿಎಲ್‌ನ 2ನೇ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ನಾಯಕ ಅಜಿಂಕ್ಯಾ ರಹಾನೆ ಅವರ ಸ್ಫೋಟಕ (69 ರನ್, 40 ಎಸೆತ, 3 ಬೌಂಡರಿ, 5 ಸಿಕ್ಸರ್) ರನ್‌ಗಳ ನೆರವಿನಿಂದ ಕೆಕೆಆರ್ ತಂಡವು ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 220 ರನ್ ಕಲೆಹಾಕಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಆರಂಭಿಸಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಅಜಿಂಕ್ಯಾ ರಹಾನೆ ಹಾಗೂ ಫಿನ್ ಅಲೆನ್ 69 ರನ್

ಗಳ ಸ್ಫೋಟಕ ಆರಂಭ ನೀಡಿದರು. ಈ ಹಂತದಲ್ಲಿ 17 ಎಸೆತಗಳಲ್ಲಿ 37 ರನ್ ಗಳಿಸಿದ್ದ ಅಲೆನ್ ಶಾರ್ದೂಲ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು.

ನಂತರ ಬಂದ ಕ್ಯಾಮೆರೂನ್ ಗ್ರೀನ್ 18 ರನ್ ಬೇಗನೆ ವಿಕೆಟ್ ಒಪ್ಪಿಸಿದರು. ಆದರೆ, ವಿಕೆಟ್ ಕೀಪರ್ ಬ್ಯಾಟರ್ ಅಂಗ್ರಿಷ್ ರಘುವಂಶಿ (51 ರನ್) ಹಾಗೂ ರಿಂಕು ಸಿಂಗ್ (ಅಜೇಯ 33) ಜೋಡಿ ಉತ್ತಮ ಜೊತೆಯಾಟ ಆಡುವ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ಅಂತಿಮವಾಗಿ ಮುಂಬೈ ಗೆಲುವಿಗೆ 221 ರನ್‌ಗಳ ಗುರಿ ನೀಡಿತು. ಮುಂಬೈ ಪರ ಶಾರ್ದೂಲ್ ಠಾಕೂರ್ 3 ವಿಕೆಟ್ ಪಡೆದು ಮಿಂಚಿದರೆ, ಹಾರ್ದಿಕ್ ಪಾಂಡ್ಯ 1 ವಿಕೆಟ್ ಪಡೆದುಕೊಂಡರು.

ಚುನಾವಣೆ: ಡಿಎಂಕೆ ಭರಪೂರ ಕೊಡುಗೆ ಘೋಷಣೆ

• ಪ್ರಜೋದಯ ವರದಿ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಗೆ ಆಡಳಿತರೂಢ ಡಿಎಂಕೆ ಭಾನುವಾರ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಮಹಿಳೆಯರಿಗೆ ತಿಂಗಳಿಗೆ 2,000 ರೂ. ಸೇರಿ ಭರಪೂರ ಉಚಿತ ಗ್ಯಾರಂಟಿಗಳನ್ನು ಘೋಷಣೆ ಮಾಡಿದೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತಮ್ಮ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು. 8ನೇ ತರಗತಿ ವರೆಗೆ ಉಪಹಾರ ಯೋಜನೆ ವಿಸ್ತರಿಸುವುದು ಮತ್ತು ಮಹಿಳೆಯರಿಗೆ ಮಾಸಿಕ ಸಹಾಯಧನವನ್ನು 2,000 ರೂ.ಗೆ ಹೆಚ್ಚಿಸುವುದು ಸೇರಿ ಪ್ರಮುಖ ಕಲ್ಯಾಣ ಕ್ರಮಗಳನ್ನು ಘೋಷಿಸಿದರು.

ದ್ರಾವಿಡ ಮಾದರಿಯ ಆಡಳಿತದಲ್ಲಿ ತಮಿಳುನಾಡು ಪ್ರಮುಖ ರಾಜ್ಯವಾಗಿ ಹೊರ ಹೊಮ್ಮಿದೆ. ಕಲ್ಯಾಣ ಯೋಜನೆಗಳ ಅನುಷ್ಠಾನದ ಉದ್ದೇಶದಿಂದ ಡಿಎಂಕೆ ಏಳನೇ ಅವಧಿಗೆ ಮತ್ತೆ ಅಧಿಕಾರಕ್ಕೆ ಬರುತ್ತದೆ. ಭಾರತದಲ್ಲಿ ಬೇರೆ ಯಾವುದೇ ರಾಜ್ಯವು ತಮಿಳುನಾಡಿನಷ್ಟು ಪರಿಣಾಮಕಾರಿಯಾಗಿ ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿಲ್ಲ. ತಮ್ಮ ಸರ್ಕಾರ ಇತರರಿಗೆ ಮಾದರಿ ಎಂದು ವಿವರಿಸಿದರು.

ಡಿಎಂಕೆ ಹೊಸದಾಗಿ ಇಲ್ಲಥರಸಿ ಎಂಬ ಯೋಜನೆ ಘೋಷಿಸಿದ್ದು, ಇದು ಮಹಿಳೆಯರು ಏನಾದರೂ ಹೊಸದನ್ನು ಖರೀದಿಸಲು ಅಥವಾ ದೂರದರ್ಶನದಂತಹ ಗೃಹೋಪಯೋಗಿ ವಸ್ತುಗಳನ್ನು ಬದಲಾಯಿಸಲು 8,000 ರೂ. ಮೌಲ್ಯದ ಕೂಪನ್ ನೀಡುವುದಾಗಿ ಭರವಸೆ ನೀಡಿದೆ. ಸ್ವಸಹಾಯ ಗುಂಪುಗಳ ಸದಸ್ಯರಾಗಿರುವ ಮಹಿಳೆಯರಿಗೆ ಉದ್ಯಮಶೀಲತೆಯನ್ನು ಬೆಂಬಲಿಸಲು ಸಬ್ಸಿಡಿ ಮತ್ತು 5 ಲಕ್ಷ ರೂ. ವರೆಗೆ ಬ್ಯಾಂಕ್ ಸಾಲ ಸಹಾಯ ನೀಡಲಾಗುವುದೆಂದು ಹೇಳಿದ್ದಾರೆ.

ವೃದ್ಧರ ಪಿಂಚಣಿಯನ್ನು 1,200 ರೂ.ನಿಂದ 2,000 ರೂ.ಗೆ ಹೆಚ್ಚಿಸಲಾಗುವುದು ಮತ್ತು ಅಂಗವಿಕಲರ ಪಿಂಚಣಿಯನ್ನು 1,500 ರೂ. ನಿಂದ 2,500 ರೂ.ಗೆ ಹೆಚ್ಚಿಸಲಾಗುವುದು.

ಕೃಷಿಗೆ ಸಂಬಂಧಿಸಿ ಡಿಎಂಕೆ ಭತ್ತದ ಖರೀದಿಯನ್ನು ಕ್ವಿಂಟಾಲ್‌ಗೆ 3,500 ರೂ.ಗೆ ಹೆಚ್ಚಿಸುವುದಾಗಿ ಮತ್ತು ಕಬ್ಬು ಖರೀದಿ ಬೆಲೆಯನ್ನು ಪ್ರತಿ ಟನ್‌ಗೆ 4,500 ರೂ.ಗೆ ನಿಗದಿಪಡಿಸುವುದಾಗಿ ಭರವಸೆ ನೀಡಿದೆ. ಅಲ್ಲದೆ ಉಚಿತ ವಿದ್ಯುತ್ ಯೋಜನೆ ಯಡಿಯಲ್ಲಿ, ಪಕ್ಷವು ರೈತರಿಗೆ ಮೀಟರ್ ಇಲ್ಲದ ಆಧುನಿಕ ಪಂಪ್‌ಸೆಟ್‌ಗಳ ಜೊತೆಗೆ ಐದು ವರ್ಷಗಳಲ್ಲಿ 10 ಲಕ್ಷ ಹೊಸ ಮನೆಗಳ ನಿರ್ಮಾಣ ಮಾಡುವ ಭರವಸೆ ನೀಡಿದ್ದಾರೆ.

ಭೂ ದಾಳಿಗೆ ಅಮೇರಿಕಾ ಸಿದ್ಧತೆ

ದುಬೈ/ಟೆಹರಾನ್: ಅಮೇರಿಕಾ ಸೇನೆಯು ಇರಾನ್‌ನಲ್ಲಿ ಭೂ ದಾಳಿ ನಡೆಸಲು ಯೋಜನೆ ರೂಪಿಸಿದೆ ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಶತ್ರುಗಳು ಭೂದಾಳಿಗೆ ಮುಂದಾದರೆ ತಕ್ಕ ಪ್ರತ್ಯುತ್ತರ ನೀಡಲಾಗುವುದೆಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಎಚ್ಚರಿಸಿದ್ದಾರೆ. 3,500 ಯೋಧರನ್ನು ಹೊತ್ತಿರುವ ಅಮೇರಿಕಾದ ಯುದ್ಧ ನೌಕೆ ಯುಎಸ್‌ಎಸ್ ಟ್ರಿಪೋಲಿ ಶುಕ್ರವಾರ ಪಶ್ಚಿಮ ಏಷ್ಯಾ ತಲುಪಿದೆ. ಭೂ ದಾಳಿ ನಡೆಸಲು ಈ ಯೋಧರನ್ನು ಪಶ್ಚಿಮ ಏಷ್ಯಾಕ್ಕೆ ಕರೆಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಹಲವು ದಿನ ನಡೆಯಲಿರುವ ಭೂ ದಾಳಿಗೆ ಅಮೇರಿಕಾ ಯೋಜನೆಗಳನ್ನು ಸಿದ್ಧಪಡಿಸುತ್ತಿದೆ. ಇರಾನ್‌ನ ತೈಲ ರಫ್ತಿನ ಪ್ರಮುಖ ಕೇಂದ್ರವಾದ ಖಾರ್ಗ್ ದ್ವೀಪ ಮತ್ತು ಹೊರ್ಮುಜ್ ಜಲಸಂಧಿಯ ಸಮೀಪದ ಪ್ರದೇಶಗಳು ಈ ದಾಳಿಯಲ್ಲಿ ಸೇರಿರುವ ಸಾಧ್ಯತೆ ಇದೆ.

ಡಬ್ಲ್ಯುಟಿಟಿ ಕಂಟೆಂಡರ್ : ಮಾನುಷ್-ದಿಯಾ ಜೋಡಿ ರನ್ನರ್ಸ್

• ಪ್ರಜೋದಯ ವರದಿ

ನವದೆಹಲಿ: ಭಾರತದ ಮಾನವ್ ಶಾ ಹಾಗೂ ದಿಯಾ ಚಿತಳೆ ಅವರು ಟ್ಯುನಿಸ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್‌ನಲ್ಲಿ ರನ್ನರ್ಸ್‌ಅಪ್ ಆದರು.

ಅಗ್ರ ಶ್ರೇಯಾಂಕ ಪಡೆದಿದ್ದ ಭಾರತದ ಜೋಡಿಯು ಶನಿವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ 13ರಿಂದ (9–11, 13–11, 10–12, 5–11) ಸ್ಪೇನ್‌ನ ಅಲ್ವರೊ ರಾಬೆಲ್ಸ್ ಹಾಗೂ ಮರಿಯಾ ಶಿಯಾವೊ ವಿರುದ್ಧ ಪರಾಭವಗೊಂಡಿತು.

ಮಾನುಷ್ ಹರ್ಮೀತ್ ದೇಸಾಯಿ ಅವರು

ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಈ ಜೋಡಿಯು ನಾಲ್ಕರ ಘಟ್ಟದಲ್ಲಿ 3–2ರಿಂದ (9–11, 5–11, 11–7, 11–5, 11–8) ಸ್ವದೇಶದ ಸ್ನೇಹಿತ್ ಸುರವಜ್ಜುಲ ಹಾಗೂ ಆಕಾಶ್ ಪಾಲ್ ವಿರುದ್ಧ ರೋಚಕ ಜಯ ಸಾಧಿಸಿತು.

ಮಾನುಷ್ ಹರ್ಮೀತ್ ಜೋಡಿಯು ಫೈನಲ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಫ್ರಾನ್ಸ್‌ನ ಫ್ಲಾರಿಯನ್ ಬುರಾಸಾದ್ ಹಾಗೂ ಈಸ್ಟಬನ್ ಡಾರ್ ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ಡಬಲ್ಸ್‌ನಲ್ಲಿ ಕಣಕ್ಕಿಳಿದಿದ್ದ ದಿಯಾ ಯಶಸ್ವಿನಿ ಘೋರ್ಪಡೆ ಹಾಗೂ ಸಿಂಡ್ರೆಲಾ ದಾಸ್ ಸುಕೃತಾ ಮುಖರ್ಜಿ ಜೋಡಿಯ ಹೋರಾಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು.

ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿ ಅರ್ಥಪೂರ್ಣ ಆಚರಣೆ

• ಪ್ರಜೋದಯ ವರದಿ

ಬೇಲೂರು: ಅಗ್ನಿವಂಶ ಕ್ಷತ್ರಿಯ ತಿಗಳರ ಆರಾಧ್ಯದೈವ ಶ್ರೀ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿಯನ್ನು ಭಕ್ತಿ ಭಾವದಿಂದ ಆಚರಿಸಲಾಯಿತು.

ಜಯಂತಿ ಅಂಗವಾಗಿ ಸಮುದಾಯದ ಮುಖಂಡರ ನೇತೃತ್ವದಲ್ಲಿ ತಾಲ್ಲೂಕು ಕಚೇರಿಯಿಂದ ಬಸವೇಶ್ವರ ವೃತ್ತದ ವರೆಗೆ ಭವ್ಯ ಮೆರವಣಿಗೆ ನಡೆಯಿತು.

ಸಮುದಾಯದ ಅಧ್ಯಕ್ಷ ಹೆಚ್.ಪಿ. ಚನ್ನೇಗೌಡ ಅವರು ಮಾತನಾಡಿ, ಜನಾಂಗದ ಅಭಿ ವೃದ್ಧಿಗೆ ಸಂಬಂಧಿಸಿ ಹಲವು ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಬೇಲೂರು ತಾಲ್ಲೂಕಿನಲ್ಲಿ ಎರಡು ಎಕರೆ ಜಾಗ ಮೀಸಲಿಡಬೇಕು. ಸಮುದಾಯ ಭವನ, ಶಿಕ್ಷಣ ಹಾಗು ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯ ಮೂಲಸೌಕರ್ಯ ನಿರ್ಮಿಸಲು ಅವಕಾಶ ಕಲ್ಪಿಸಬೇಕೆಂದು ಹೇಳಿದರು.

ಆಶ್ರಯವಿಲ್ಲದೆ ಸಂಕಷ್ಟ ಅನುಭವಿಸುತ್ತಿರುವ ಕುಟುಂಬಗಳನ್ನು ಗುರುತಿಸಿ ಸರ್ಕಾರದ ವಿವಿಧ ಯೋಜನೆಗಳಡಿ ಮನೆಗಳನ್ನು ಒದಗಿಸಬೇಕು. ಬೀದಿ ಬದಿಯಲ್ಲಿ ವ್ಯಾಪಾರ ನಡೆಸುತ್ತಿರುವ ಸಮುದಾಯದ ಸದಸ್ಯರ ಸಮಸ್ಯೆಗಳನ್ನೂ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಬೇಲೂರಿನ ಮಾರುಕಟ್ಟೆಯಲ್ಲಿ ಹೂ ಮಾರಾಟ ಮಾಡುವವರಲ್ಲಿ ಬಹುಪಾಲು ತಮ್ಮ ಸಮುದಾಯದವರೇ ಇದ್ದಾರೆ. ಅವರಿಗೆ ಶಾಶ್ವತ ಅಂಗಡಿ, ಕುಡಿಯುವ ನೀರು, ಶೌಚಾಲಯ ಸೇರಿ ಮೂಲಸೌಲಭ್ಯ ಕಲ್ಪಿಸಬೇಕು. ಪುರಸಭೆ ವತಿಯಿಂದ ಸಮುದಾಯದ ಕಾರ್ಯಕ್ರಮ ನಡೆಯಲು ಸಮುದಾಯ ಭವನ ನಿರ್ಮಿಸಿಕೊಡಬೇಕೆಂದು ಆಗ್ರಹಿಸಿದರು. ಸಂಘದ ಖಜಾಂಚಿ ಬಿ.ಎ.ಮಂಜುನಾಥ್, ಗೋವಿಂದೇಗೌಡ ಇತರರಿದ್ದರು.

ನೆಲ ಜಲ ಸಂರಕ್ಷಣೆ ನಮ್ಮ ಆದ್ಯತೆಯಾಗಬೇಕು

• ಪ್ರಜೋದಯ ವರದಿ

ಹಾಸನ: ಹುಟ್ಟಿಗಿಂತ ಮೊದಲು ತಾಯಿ ಗರ್ಭದಿಂದಲೇ ನೀರು ಮತ್ತು ಮನುಷ್ಯನ ಸಂಬಂಧ ಶುರುವಾಗುತ್ತದೆ. ಪೆಟ್ರೋಲ್, ಗ್ಯಾಸ್ ಇಲ್ಲದೆಯೂ ಬದುಕಬಹುದು, ಆದರೆ ನೀರಿಲ್ಲದೆ ಬದುಕು ಸಾಧ್ಯವಿಲ್ಲ. ಆದ್ದರಿಂದ ಮುಂದಿನ ಪೀಳಿಗೆಗಾಗಿ ಸ್ವಸ್ಥ ನೆಲ, ಜಲ ಉಳಿಸುವ ಜವಾಬ್ದಾರಿಯನ್ನು ಪ್ರತಿಯೊಬ್ಬರು ಹೊರಬೇಕೆಂದು ಪರಿಸರ ಅಧ್ಯಯನ ವಿಭಾಗದ ಉಪನ್ಯಾಸಕಿ ಡಾ. ಚೂಡಾಮಣಿ ಅವರು ಹೇಳಿದರು.

ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಅರಣ್ಯ ಮತ್ತು ಜಲದಿನದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ವ್ಯಕ್ತಿಯೊಬ್ಬ ದಿನವೊಂದಕ್ಕೆ 300 ಲೀ ನೀರು ಉಳಿಸುವ ಸಾಧ್ಯತೆಯಿದ್ದು, ಪ್ರತಿಯೊಬ್ಬರು ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು, ನೆಲ ಜಲ ಸಂರಕ್ಷಣೆ ಉತ್ತಮ ಭವಿಷ್ಯತ್ತಿಗಾಗಿ ಪ್ರಮುಖ ಆದ್ಯತೆಯಾಗಬೇಕು ಎಂದರು.

ಡಾ.ಎಂ.ಬಿ.ಇರ್ಷಾದ್ ಅವರು ಮಾತನಾಡಿ, ತಾಯಿ ಮತ್ತು ನಿಸರ್ಗ ಇಬ್ಬರೂ ನಮ್ಮ ಬದುಕಿನ ಪ್ರಮುಖ

ಅಂಗ. ಕಾಂಕ್ರಿಟ್ ನಾಡಿನಲ್ಲಿ ನೀರು ಮತ್ತು ಅರಣ್ಯ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಬೇಕಿದೆ. ನಮ್ಮ ಸಣ್ಣ ಸಣ್ಣ ಪ್ರಯತ್ನಗಳೂ ನೀರಿನ ಸಂರಕ್ಷಣೆ ಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆಂದರು.

ಪ್ರಾಂಶುಪಾಲ ಡಿ.ಎಸ್.ರಾಜು ಅವರು ಮಾತನಾಡಿ, ಜಾಗತಿಕ ಯುದ್ಧಗಳ ವೈಪರೀತ್ಯದ ಕಾಲದಲ್ಲಿ ನೈಸರ್ಗಿಕ ಉತ್ಪನ್ನಗಳ ಮೌಲ್ಯಗಳನ್ನು ಮನದಟ್ಟು ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ನೈಸರ್ಗಿಕ ಸಂಪ ನ್ಮೂಲಗಳನ್ನು ಸರಿಯಾಗಿ ಬಳಸಿ ಕೊಂಡಲ್ಲಿ ಬದುಕು ಸುಲಭವಾಗುತ್ತದೆ. ಕೃಷಿ ಮೂಲಕ ಪರಿಸರ ಪ್ರೇಮಿ ನಡೆಯನ್ನು ರೂಢಿಸಿಕೊಂಡಿರುವುದು ನನ್ನ ಮಟ್ಟಿಗೆ ಆತ್ಮ ತೃಪ್ತಿಯ ಕೆಲಸ ಎಂದು ಹೇಳಿದರು.

ಭೂಗೋಳ ಶಾಸ್ತ್ರ ವಿಭಾಗದ ಡಾ. ಸುಜಾತ ಅವರು, ಮಲಿನ ನೀರನ್ನು ಶುದ್ಧಗೊಳಿಸುವ ನಿಟ್ಟಿನಲ್ಲಿ ಟ್ರೀಟ್ ಪ್ಲಾಂಟ್‌ಗಳ ಸ್ಥಾಪನೆ, ನೀರಿನ ಮರುಪೂರ್ಣ ಮತ್ತು ಮರುಬಳಕೆಗೆ ಆದ್ಯತೆ ನೀಡುವ ಮೂಲಕ ಜಲ ಸಂರಕ್ಷಣೆಗೆ ನಮ್ಮ ಕೊಡುಗೆ ನೀಡ ಬಹುದು. ನೀರು ಉಳಿಸಿ ಅನ್ನು ವುದು ಘೋಷಣೆಯಾಗದೇ ಅದನ್ನು ನಮ್ಮ ದಿನನಿತ್ಯದ ನಡವಳಿಕೆಯಾಗಿ ರೂಪಿಸಿಕೊಳ್ಳಬೇಕು. ಹನಿ ನೀರಿನ ಪ್ರಾಮುಖ್ಯತೆಯನ್ನು ವಿದ್ಯಾರ್ಥಿ ದೆಸೆಯಿಂದಲೇ ರೂಢಿಸಿಕೊಂಡಲ್ಲಿ ಜಲ ಸಂರಕ್ಷಣೆ ಸಾಧ್ಯ ಎಂದರು. ವಿಭಾಗದ ವತಿಯಿಂದ ಆಯೋಜಿಸಿದ್ದ ಪೋಸ್ಟರ್ ಪ್ರಸ್ತುತಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪತ್ರಾಂಕಿತ ವ್ಯವಸ್ಥಾಪಕ ಕೆ.ಟಿ. ಸತ್ಯಮೂರ್ತಿ, ಸಹಾಯಕ ಪ್ರಾಧ್ಯಾಪಕರಾದ ಡಿ.ದೀಪಾ, ಲಿಂಗಮೂರ್ತಿ, ಭೂಗೋಳ ಶಾಸ್ತ್ರ ವಿಭಾಗದ ಸುನೀಲ್, ಸದಾಫ್, ವಿನೋದಾ, ಪರಿಸರ ಅಧ್ಯಯನ ವಿಭಾಗದ ರೋಜ್ ಮಂಥೆರೋ ಉಪಸ್ಥಿತರಿದ್ದರು.

ಚ.ರಾ.ಪಟ್ಟಣದಲ್ಲಿ ಇಂದಿನಿಂದ ಬೇಸಿಗೆ ಶಿಬಿರ ಆರಂಭ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪಟ್ಟಣದ ಎ-1 ಸ್ಪೋರ್ಟ್ಸ್ ಅಕಾಡೆಮಿ ಹಾಗು ಇನ್ಸ್ಟಿ ಟ್ಯೂಷನ್ ವತಿಯಿಂದ ಮಾ.30 ರಿಂದ ಬೇಸಿಗೆ ಶಿಬಿರ ಆರಂಭವಾಗಲಿದೆ ಎಂದು ಅಕಾಡೆಮಿ ಮುಖ್ಯಸ್ಥ ರಂಗನಾಥ್ ಅವರು ಹೇಳಿದರು.

ಬೆಳಿಗ್ಗೆ 6.30 ರಿಂದ 9 ಗಂಟೆ ಹಾಗು ಸಂಜೆ 4 ಗಂಟೆಯಿಂದ 6.30ರ ವರೆಗೆ ಕ್ರಿಕೆಟ್ ತರಬೇತಿ ನೀಡಲಾಗುತ್ತದೆ. ಮೈಸೂರು ಹಾಗು ಬೆಂಗಳೂರಿನ ನುರಿತ ತರಬೇತುದಾರರು ಕ್ರೀಡಾಪಟುಗಳಿಗೆ ತರಬೇತಿ ನೀಡುತ್ತಾರೆ. 2 ತಿಂಗಳ ಶಿಬಿರಕ್ಕೆ 6 ಸಾವಿರ ರೂ. ಸೇವಾ ಶುಲ್ಕ ನಿಗದಿ ಪಡಿಸಲಾಗಿದೆಂದು ತಿಳಿಸಿದರು.

ಪಟ್ಟಣದ ನವೋದಯ ವಿದ್ಯಾ ಸಂಸ್ಥೆಯ ಹಿಂಭಾಗದಲ್ಲಿ ನವೀಕರಣಗೊಳಿಸಿರುವ ಅಕಾಡೆಮಿಯಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಮಕ್ಕಳ ಕ್ರೀಡಾ ಪ್ರೋತ್ಸಾಹದ ನಿಟ್ಟಿನಲ್ಲಿ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಉತ್ತಮ ತರಬೇತಿಯೊಂದಿಗೆ ಕ್ರಿಕೆಟ್ ಜಗತ್ತಿಗೆ ಪರಿಚಯಿ ಸುವುದು ಅಕಾಡೆಮಿಯ ಉದ್ದೇಶವಾಗಿದೆ. ಈ ಶಿಬಿರವನ್ನು ತಾಲ್ಲೂಕಿನ ಕ್ರೀಡಾಸಕ್ತರು ಸದ್ಬಳಕೆ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.

ಬೇಸಿಗೆಯ ರಜೆ ಹಿನ್ನಲೆ 2 ತಿಂಗಳು ಬೇಸಿಗೆ ಶಿಬಿರ ಆಯೋ ಜಿಸಿದ್ದು ಬೇಸಿಗೆ ನಂತರವೂ ಎಂದಿನಂತೆ ಅಕಾಡೆಮಿಯಲ್ಲಿ ಪ್ರತಿದಿನವೂ ತರಬೇತಿಯು ನಿಯಮ ಹಾಗೂ ಸಮಯ ಅನುಸಾರವಾಗಿ ತರಗತಿ ಮುಂದುವರಿಯಲಿವೆ ಎಂದು ಮಾಹಿತಿ ನೀಡಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕತ್ತರಿಘಟ್ಟದ ಮಳೆಯಮ್ಮ ಆಧ್ಯಾತ್ಮಿಕ ಕೇಂದ್ರದ ಚಂದ್ರಶೇಖರ ಗುರೂಜಿ, ತಹಶೀಲ್ದಾರ್ ಶಂಕರಪ್ಪ, ಪುರಸಭಾ ಮುಖ್ಯಾಧಿಕಾರಿ ಯತೀಶ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆಂದರು.

ಕಚ್ಚಾ ತೈಲಕ್ಕೆ ಕೊರತೆ ಇಲ್ಲ: ಪೆಟ್ರೋಲಿಯಂ ಸಚಿವಾಲಯ

• ಪ್ರಜೋದಯ ವರದಿ

ನವದೆಹಲಿ: ದೇಶದಲ್ಲಿ ಕಚ್ಚಾ ತೈಲಗಳ ದಾಸ್ತಾನು ಅಗತ್ಯಕ್ಕೆ ತಕ್ಕಷ್ಟು ಇದು ಸಾರ್ವಜ ನಿಕರು ಆತಂಕಪಡುವ ಅವಶ್ಯಕತೆಯಿಲ್ಲ ಎಂದು ಪೆಟ್ರೋಲಿಯಂ ಸಚಿವಾಲಯ ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿ ಯುದ್ಧದಿಂದ ಕಚ್ಚಾ ತೈಲ ದಾಸ್ತಾನಿನಲ್ಲಿ ಕೊರತೆಯುಂಟಾಗಿದೆ ಎಂಬ ಆತಂಕ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇಂಧನ ದಾಸ್ತಾನು ಸಾಕಷ್ಟಿದೆ ಎಂದು ಸರ್ಕಾರ ಹೇಳುತ್ತಿದ್ದರೂ ಜನರಿಗೆ ಆತಂಕ ತಪ್ಪಿಲ್ಲ. ಆದರೆ ಸಚಿವಾಲಯ ಭಾನುವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ. ಇಂಧನ ಪೂರೈಕೆ ನಿರಂತರವಾಗಿ ನಡೆಯಲು ಪ್ರಯತ್ನಿಸಲಾಗುತ್ತಿದೆ. ಸಾರ್ವಜನಿಕರು ಯಾವುದೇ ವದಂತಿಗಳನ್ನು ನಂಬಬೇಡಿ ಎಂದು ಕೇಂದ್ರ ಸರ್ಕಾರ ಮನವಿ ಮಾಡಿದೆ.

ಎಲ್ಲಾ ಪೆಟ್ರೋಲ್ ಪಂಪ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ನಿರಂತರವಾಗಿ ಆಗುತ್ತಿದೆ. ಎಲ್‌ಪಿಜಿ ಸಮಸ್ಯೆ ಕಡಿಮೆ ಮಾಡಲು ಪಿಎನ್‌ಜಿ ಸಂಪರ್ಕ ಹೆಚ್ಚಿಸಲಾಗಿದೆ. ಎಲ್ಲಾ ರಿಫೈನರಿಗಳು ಉತ್ತಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ. ಕಡಿಮೆ ಮಾಡಿದೆ. ಪೆಟ್ರೋಲಿಯಂ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಅನ್ನು ರಫ್ತು ಮಾಡದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಒಂದು ಲೀಟರ್ ಡೀಸೆಲ್‌ಗೆ 21.5 ರೂ. ರಫ್ತು ಸುಂಕ ವಿಧಿಸಲಾಗುತ್ತಿದೆ ಎಂದು ಸರ್ಕಾರ ತಿಳಿಸಿದೆ.

ಎಲ್‌ಪಿಜಿ ಸ್ಥಿತಿ ಹೇಗಿದೆ

ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಆಗಿಲ್ಲ. ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಸಹಜವಾಗಿ ನಡೆದಿದೆ. ಕಮರ್ಷಿಯಲ್ ಗ್ಯಾಸ್ ಹಂಚಿಕೆಯು ಶೇ. 70ರ ಸಾಮರ್ಥ್ಯಕ್ಕೆ ಏರಿದೆ. ಮಾರ್ಚ್ ತಿಂಗಳಲ್ಲಿ 2.9 ಲಕ್ಷ ಹೊಸ ಪಿಎನ್‌ಜಿ ಸಂಪರ್ಕ ನೀಡಲಾ ಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ. ಈ ಕ್ರಮಗಳಿಂದ ಎಲ್‌ಪಿಜಿ ಮೇಲಿನ ಒತ್ತಡ ಕಡಿಮೆ ಆಗುವ ನಿರೀಕ್ಷೆ ಇದೆ.

ರಂಗಭೂಮಿ ನಿರ್ದೇಶಕನ ಜವಾಬ್ದಾರಿ ಮಹತ್ತರ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ

• ಪ್ರಜೋದಯ ವರದಿ

ಹಾಸನ: ರಂಗಭೂಮಿಯಲ್ಲಿ ಪಾತ್ರಧಾರಿಗಳ ಮೂಲಕ ಪಾತ್ರಕ್ಕೆ ಜೀವ ತುಂಬುವ ಮಹತ್ತರ ಜವಾಬ್ದಾರಿ ನಿರ್ದೇಶಕರ ಮೇಲಿದೆ. ಹೀಗಾಗಿ ಭೌತಿಕ ರಂಗಭೂಮಿಗೆ ಸೂತ್ರಧಾರಿಯೇ ನಿರ್ದೇಶಕರು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ ಅವರು ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್, ರಂಗಭೂಮಿ ಕಲಾವಿದರ ಸಂಘ, ಜಿಲ್ಲಾ ಕಲಾವಿದರ ಹಿತರಕ್ಷಣಾ ಸಮಿತಿ ಹಾಗು ಜಿಲ್ಲೆಯ ವಿವಿಧ ಕಲಾ ಸಂಘಗಳ ಸಹಯೋಗದಲ್ಲಿ ಆಯೋಜಿಸಿದ್ದ ರಂಗಗೀತೆ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭೌತಿಕ ರಂಗಭೂಮಿ ಎಂದರೆ ನಟರ ದೇಹಭಾಷೆ, ಚಲನೆ, ಭಾವಭಂಗಿ ಇವುಗಳ ಮೂಲಕ ಕಥೆ ಹೇಳುವ ರಂಗಕಲೆ. ಇಲ್ಲಿ ಮಾತು ಕಡಿಮೆ, ಚಲನ ಹೆಚ್ಚು, ಇವೆಲ್ಲವನ್ನು

ಸೂಕ್ಷ್ಮವಾಗಿ ಗಮನಿಸಿ ನಿರ್ದೇಶಕರು ಪಾತ್ರಕ್ಕೆ ಜೀವ ತುಂಬುವ ಮಹತ್ತರವಾದ ಜವಾಬ್ದಾರಿ ನಿರ್ವಹಿಸಬೇಕಿದೆ ಎಂದರು.

ಹಿರಿಯ ಕಲಾವಿದ ಗ್ಯಾರಂಟಿ ರಾಮಣ್ಣ ಅವರು ಮಾತನಾಡಿ, ರಂಗಭೂಮಿ ಎಂದರೆ ಭೂಮಿಯ ಎಲ್ಲಿಯಾದರೂ ಅದು ಬೆಟ್ಟವಾಗಿರಲಿ, ಬೀದಿಯಾಗಿರಲಿ ರಂಗದ ಮೇಲಾಗಲಿ ಒಟ್ಟಾರೆ ಭೂಮಿಯಲ್ಲಿ ಕಲೆ ಪ್ರದರ್ಶಿಸುವುದೇ ಆಗಿದೆ ಎಂದರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ, 1948ರಲ್ಲಿ ವಿಶ್ವ ಸಂಸ್ಥೆಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಸ್ಥೆ ಯುನೆಸ್ಕೋ ಒಂದು ಸ್ವಾಯತ್ತ ವೃತ್ತಿಪರವಾದ ಅಂತ್ರಾರಾಷ್ಟ್ರೀಯ ರಂಗ ಸಂಸ್ಥೆ ಪ್ರಾರಂಭಿಸಿ ಅದನ್ನು ಇಂಟರ್ ನ್ಯಾಷನಲ್ ಥಿಯೇಟರ್ ಇನ್‌ಸ್ಟಿಟ್ಯೂಟ್ ಎಂದು ಕರೆಯಲಾಗುತ್ತದೆ. 1961ರಲ್ಲಿ ಹಲ್ಸಂಕಿಯಲ್ಲಿ ನಡೆದ ಅಂತ್ರಾರಾಷ್ಟ್ರೀಯ ಥಿಯೇಟರ್ ಕಾಂಗ್ರೆಸ್ ಸಮ್ಮೇಳನದಲ್ಲಿ ವಿಶ್ವ ರಂಗಭೂಮಿ ದಿನಾಚಾರಣೆ ಆಚರಿಸುವ ವಿಷಯ ಪ್ರಸ್ತಾಪವಾಗಿ ಈ ಪ್ರಸ್ತಾವನೆಗೆ ವ್ಯಾಪಕ ಬೆಂಬಲ ದೊರಕಿ 1962ರಿಂದ ವಿಶ್ವ ರಂಗಭೂಮಿ ದಿನಾಚರಣೆ ಆಚರಿಸಿಕೊಂಡು ಬರಲಾಗಿದೆ ಎಂದು ತಿಳಿಸಿದರು.

ನಿವೃತ್ತ ತಹಶೀಲ್ದಾರ್ ಎ.ವಿ.ರುದ್ರಪ್ಪಾಜಿರಾವ್ ಮಾತನಾಡಿದರು. ಜಿಲ್ಲಾ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ರಾಮಘಟ್ಟ ಜಗದೀಶ್, ನಟರಾದ ಹೆಚ್.ಎಂ.ಪ್ರಭಾಕರ್, ಆಡುವಳ್ಳಿ ಸುನೀಲ್, ಕಾರ್ಲೆ ಗೋವಿಂದೇಗೌಡ, ಪ್ರದೀಪ್ ಗವೇನಹಳ್ಳಿ, ಭುವನೇಶ್ವರಿ ಮೊದಲಾದವರಿದ್ದರು.

ಈ ವೇಳೆ 50ಕ್ಕೂ ಹೆಚ್ಚು ಕಲಾವಿದರು, ಮಹಿಳೆಯರು ಒಳಗೊಂಡು ಯಶಸ್ವಿ ರಂಗಗೀತೆ ಗಾಯನ ನಡೆಸಿದ್ದು, ಎಲ್ಲರ ಗಮನ ಸೆಳೆಯಿತು.

ಬೆಳ್ಳೂರು ಕ್ರಾಸ್‌ನಿಂದ ಆಗಮಿಸಿದ್ದ ಡಿ.ಸಿ.ಮಂಜುನಾಥ್ ಹಾರ್ಮೋನಿಯಂ, ಅಶ್ವಥ್ ಕುಮಾರ್ ಕೀ ಬೋರ್ಡ್ ಸಹಕಾರ ನೀಡಿದರು. 50 ಮಂದಿ ರಂಗ ಕಲಾವಿದರನ್ನೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು. ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಇದ್ದರು.

ವೈಭವದ ಅಮ್ಮನಬ್ಯಾಡರಹಳ್ಳಿ ರಥೋತ್ಸವ

• ಪ್ರಜೋದಯ ವರದಿ

ಹಳೇಬೀಡು: ಕಲ್ಲಳ್ಳಿ ಅರಣ್ಯ ಪ್ರದೇಶದ ಕಾಡಂಚಿನಲ್ಲಿರುವ ಅಮ್ಮನ ಬ್ಯಾಡರಹಳ್ಳಿಯಲ್ಲಿ ಕೊಲ್ಲಾಪುರದಮ್ಮ, ಚಾಮುಂಡೇಶ್ವರಿ ಅಮ್ಮನವರ ರಥೋತ್ಸವ ವೈಭವದಿಂದ ನೆರವೇರಿತು.

ಕೊಲ್ಲಾಪುರದಮ್ಮ, ಚಾಮುಂಡೇಶ್ವರಿ ಹಾಗೂ ಕೆಂಚರಾಯ ಸ್ವಾಮಿಯ ಗಣ ಮಕ್ಕಳು ವಾದ್ಯಗಳ ಲಯಕ್ಕೆ ತಕ್ಕಂತೆ ಕುಣಿದರು. ನೆರೆದಿದ್ದ ಭಕ್ತರು ಶಿಳ್ಳೆ ಹಾಕಿ, ಜಯ ಘೋಷ ಹಾಕುತ್ತ ಕುಣಿಯುತ್ತಿದ್ದ ಗಣ ಮಕ್ಕಳನ್ನು ಹುರಿದುಂಬಿಸಿದರು. ವಿವಿಧ ಪೂಜಾ ವಿಧಾನ ನೆರವೇರಿಸಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ನೆರೆದಿದ್ದ ಭಕ್ತರು ನೂಕುನುಗ್ಗಲಿನಲ್ಲಿ ರಥ ಎಳೆದರು. ಕೊಲ್ಲಾಪುರದಮ್ಮನವರಿಗೆ ಜೈ, ಚಾಮುಂಡೇಶ್ವರಿ ಅಮ್ಮನವರಿಗೆ ಜೈ, ಕೆಂಚರಾಯ ಸ್ವಾಮಿಗೆ ಜೈ ಎಂದು ಘೋಷಣೆ ಕೂಗಿದ ಜನರು ಭಕ್ತಿ ಲೋಕದಲ್ಲಿ ಮಿಂದೆದ್ದರು.

ದೇವಾಲಯದ ಸುತ್ತ ಚಲಿಸಿದ ರಥ ಸ್ವಸ್ಥಾನಕ್ಕೆ ಬಂದಾಗ ಜಮಾಯಿಸಿದ ಭಕ್ತರು ರಥದಲ್ಲಿ ಆರೋಹಣ ಮಾಡಿದ ದೇವತೆಗಳ ದರ್ಶನ ಪಡೆದರು. ವಿವಿಧ ಊರಿನಿಂದ ಆಗಮಿಸಿದ್ದ ಭಕ್ತರು ಹಣ್ಣು ಕಾಯಿ ಪೂಜೆ ಮಾಡಿಸಿದರು.

ಗ್ರಾಮದಲ್ಲಿ ಮೂರು ದಿನದಿಂದ ಜಾತ್ರೆ ನಡೆಯಿತು. 26ರಂದು ಮಳೆ, ಬೆಳೆ ಸಮರ್ಪಕವಾಗಿ ಬರಲಿ, ಜನರು ಸಂತೃಪ್ತಿಯಿಂದ ಬದುಕುವಂತಾಗಬೇಕೆಂದು ಪ್ರಾರ್ಥಿಸಿ ಸತ್ಯಮಲ್ಲೇಶ್ವರ ಸ್ವಾಮಿಯವರ ಪರ ನೆರವೇರಿಸಿ, ಜಾತ್ರೆ ಆರಂಭಿಸಲಾಯಿತು. ಅಂದು ರಥ ಶುದ್ಧೀಕರಿಸಿ ಅಭಿಷೇಕ ಪೂಜೆ ನೆರವೇರಿಸಲಾಯಿತು.

27ರಂದು ಶುಕ್ರವಾರ ರಥಕ್ಕೆ ಕಳಸ ಸ್ಥಾಪನೆ ನೆರವೇರಿಸಲಾಯಿತು. ನಂತರ ಥಳಿಗೆ ತೇರು ನಡೆಯಿತು. ಸುಮಂಗಲೆಯರು ಹಾಗೂ ಪುಟ್ಟ ಹೆಣ್ಣು ಮಕ್ಕಳು ಗುಗ್ಗಳಾರತಿ ನಡೆಸಿದರು. ವಿದ್ಯುತ್ ದೀಪಗಳ ಬೆಳಕಿನಲ್ಲಿ ಅಮ್ಮನವರ ಸಿಡಿ ಹಾಡಿಸಲಾಯಿತು.

33ನೇ ವರ್ಷದ ಜಿನ ಮಂದಿರದ ವಾರ್ಷಿಕ ಪೂಜೆ

• ಪ್ರಜೋದಯ ವರದಿ

ಹಳೇಬೀಡು: ಶಾಂತಿನಾಥ ಸ್ವಾಮಿಯ ಆರಾಧನ ವಿಧಾನ ಹಾಗೂ 33ನೇ ವರ್ಷದ ಜಿನ ಮಂದಿರದ ವಾರ್ಷಿಕ ಪೂಜೆ ಅಡಗೂರು ಜೈನ ಬಸದಿಯಲ್ಲಿ ಭಾನುವಾರ ವೈಭವದಿಂದ ನೆರವೇರಿತು.

ಮುಂಜಾನೆ 6.30ರಿಂದ ಬಸದಿಯಲ್ಲಿ ಪೂಜಾ ವಿಧಾನ ಆರಂಭವಾಯಿತು. ಧರ್ಮ ಧ್ವಜಾರೋಹಣ ನೆರವೇರಿಸಲಾಯಿತು. ನಿತ್ಯ ಪೂಜೆ ನೆರವೇರಿಸಿ ವಿವಿಧ ಪೂಜಾ ಕಾರ್ಯ ಆರಂಭಿಸಲಾಯಿತು. ಮಿರಿಮಿರಿ ಮಿಂಚುತ್ತಿದ್ದ ಬಳಿಯ ಬಟ್ಟೆ ಧರಿಸಿದ್ದ ಜೇನು ಮಹಿಳೆಯರು ಹಾಗೂ ಪುರುಷರು ಶ್ರದ್ಧಾ ಭಕ್ತಿಯಿಂದ ಭಾಗವಹಿಸಿದ್ದರು.

ಪುರೋಹಿತರ ಮಂತ್ರ ಘೋಷದೊಂದಿಗೆ ಮಂಡಲದಲ್ಲಿ ನವ ಕಳಸ ಪ್ರತಿಷ್ಠಾಪಿಸಿದ ನಂತರ ಆರಾಧನೆ ಆರಂಭವಾಯಿತು. ಜಗತ್ತಿನಲ್ಲಿ ಸಮೃದ್ಧಿ ನೆಲೆಸಲಿ, ಪ್ರತಿಯೊಬ್ಬರಿಗೂ ಸುಖ ಶಾಂತಿ ದೊರಕಲಿ ಎಂದು ವಿವಿಧ ಪೂಜಾ ವಿಧಾನ ನೆರವೇರಿಸಲಾಯಿತು.

ಮಂತ್ರ ಪಠನದೊಂದಿಗೆ ಸುಶ್ರಾವ್ಯವಾಗಿ ಜಿನ ಭಕ್ತಿ ಗೀತೆಗಳು ಕೇಳಿಬಂತು. ಗಂಟೆ, ಜಾಗಟೆಗಳ ನಾದ ನೆರೆದಿದ್ದ ಶ್ರಾವಕ ಶ್ರಾವಕಿಯರನ್ನು ಭಕ್ತಿಯ ಲೋಕಕ್ಕೆ ಕೊಂಡೊಯ್ಯಿತು.

ಶಾಂತಿನಾಥ ಎಂದಾಕ್ಷಣ ನೆನಪಾಗುವುದು ಶಾಂತಿಯ ಸಂದೇಶ. ಜೀವನದಲ್ಲಿ ಉಂಟಾದ ಅಶಾಂತಿಯಿಂದ ಮುಕ್ತಿ ಪಡೆದು, ಶಾಂತಿ ಸ್ಥಾಪಿಸಲು ಶಾಂತಿನಾಥ ವಿಧಾನ ನಡೆಸಲಾಗುತ್ತಿದೆ. ತೀರ್ಥಂಕರರಾಗುವ ಮೊದಲು ಚಕ್ರವರ್ತಿಯಾಗಿದ್ದ ಶಾಂತಿನಾಥರು ತಮ್ಮ ಸಾಮ್ರಾಜ್ಯದಲ್ಲಿ ಪ್ರಜೆಗಳು ಮಾತ್ರವಲ್ಲದೆ, ಸಕಲ ಜೀವಿಗಳಿಗೂ ನೆಮ್ಮದಿಯ ವಾತಾವರಣ ಕಲ್ಪಿಸಿದ್ದರು. ಸಾಮ್ರಾಜ್ಯದಲ್ಲಿ ದ್ವೇಷ ಅಸೂಯೆ ಇಲ್ಲದಂತೆ ನೋಡಿಕೊಂಡಿದ್ದರು. ಅವರ ಆಳ್ವಿಕೆ ಕಾಲದಲ್ಲಿ ಯುದ್ಧಗಳು ನಡೆಯುವ ಅವಕಾಶ ಇಲ್ಲದಂತೆ ಆಡಳಿತ ನಡೆಸಿದ್ದರೆಂದು ಜೈನ ಸಮಾಜ ಮುಖಂಡ ಎಚ್.ಎಸ್.ಅನಿಲ್ ಕುಮಾರ್ ಹೇಳಿದರು.

ಚಿಕ್ಕ ಬಾಹುಬಲಿಗೆ ಪ್ರಥಮ ವರ್ಷದ ಮಸ್ತಕಾಭಿಷೇಕ

• ಪ್ರಜೋದಯ ವರದಿ

ಶ್ರವಣಬೆಳಗೊಳ: ಕ್ಷೇತ್ರದಲ್ಲಿ ಭಗವಾನ್ ನೇಮಿನಾಥ ತೀರ್ಥಂಕರರ ವಾರ್ಷಿಕ ಪಂಚಕಲ್ಯಾಣ ಮಹಾ ರಥೋತ್ಸವದ ಪ್ರಯುಕ್ತ ಭಂಡಾರ ಬಸದಿಯ ಚವ್ವಿಸ ತೀರ್ಥಂಕರರ ಸನ್ನಿಧಿಯ ಪ್ರಾಂಗಣದ ಚಿಕ್ಕ ಬಾಹುಬಲಿಗೆ ಪ್ರಥಮ ವರ್ಷದ ಮಸ್ತಕಾಭಿಷೇಕವನ್ನು ಧಾರ್ಮಿಕ ವಿಧಿವಿಧಾನಗಳೊಂದಿಗೆ ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗ ದರ್ಶನದಲ್ಲಿ ಭಕ್ತಿಯಿಂದ ನೆರವೇರಿಸಲಾಯಿತು.

ಬಾಹುಬಲಿಯ ಸನ್ನಿಧಿಯಲ್ಲಿ 54 ಕಲಶ, ಚತುಷ್ಕೋನ ಕಲಶ, ಶಾಂತಿಧಾರಾ ಕಲಶ ಪ್ರತಿಷ್ಠಾಪಿಸಲಾಗಿತ್ತು. ಪ್ರಥಮ ಕಲಶವನ್ನು ಚಾರುಕೀರ್ತಿ ಶ್ರೀಗಳು ಅಭಿಷೇಕ ಮಾಡಿ ಚಾಲನೆ ನೀಡುತ್ತಿದ್ದಂತೆಯೇ ವಿವಿಧ ಮಂಗಲ ವಾದ್ಯಗಳು, ಮಹಾ ಮಂತ್ರಗಳು, ಸಂಗಿತದೊಂದಿಗೆ ಜಿನಸ್ಮರಣೆ ಮಾಡಲಾಯಿತು. ಇತ್ತ ಭಕ್ತರ ಹರ್ಷೋದ್ಘಾರ ಮುಗಿಲು ಮುಟ್ಟಿತ್ತು.

ಜಲಾಭಿಷೇಕದ ನಂತರ ಎಳನೀರು, ಕಾಯಿತುರಿ, ಬಗೆಬಗೆಯ ಹಣ್ಣುಗಳ ಅಭಿಷೇಕ ನೆರವೇರಿತು. ಮಾವು, ದಾಳಿಂಬೆ, ಮೋಸಂಬಿ, ಕಿತ್ತಳೆ ಹಣ್ಣುಗಳಿಂದ ತಯಾರಿಸಿದ ರಸದಿಂದ ಅಭಿಷೇಕ ನೆರವೇರಿಸಿದಾಗ ನೆರೆದಿದ್ದ ಭಕ್ತರು ಬಾಹುಬಲಿಗೆ ಜೈಕಾರ ಹಾಕಿದರು.

ಕಬ್ಬಿನಹಾಲು, ಸಕ್ಕರೆ, ಬೆಲ್ಲ, ಕ್ಷೀರ, ಮೊಸರು, ಅಕ್ಕಿಹಿಟ್ಟು, ಅರಿಷಿಣದ ಪುಡಿ, ಅರಿಶಿಣ, ಸರ್ವೌಷಧಿಯ ಅಭಿಷೇಕಗಳು, ಅಲೆಅಲೆಯಾಗಿ ಗೊಮ್ಮಟನ ಮೈಮೇಲೆ ಸಾಗುತ್ತಾ, ಭಗವಂತನ ಪಾದದ ಬಳಿ ಬರಲು ಪ್ರತಿಯೊಂದೂ ಚಿಕ್ಕ ಅಲೆಗಳು ತಾಮುಂದು ಎಂಬಂತೆ ಪೈಪೋಟಿ ನಡೆಸುತ್ತಿದ್ದವೇನೋ ಎಂಬಂತೆ ಕಾಣಿಸುತ್ತಿತ್ತು. ಚತುಷ್ಕೋನ ಕಲಶದ ನಂತರ ಚಂದನ, ಅಷ್ಟಗಂಧ, ಬಿಳಿಗಂಧ, ಕೇಸರಿ ಅಭಿಷೇಕಗಳು ನಡೆದಾಗ ನೆರೆದಿದ್ದ ಭಕ್ತರು ಆ ಸುಂದರ ಕ್ಷಣವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದರು.



ಅನೇಕ ಪ್ರದೇಶಗಳಿಂದ ಸಂಗ್ರಹಿಸಿ ತಂದಿದ್ದ ವಿವಿಧ ಪುಷ್ಪಗಳಿಂದ ಪುಷ್ಪವೃಷ್ಟಿ ಮಾಡಲಾ ಯಿತು. ಲೋಕ ಶಾಂತಿಗಾಗಿ ಶಾಂತಿಧಾರ ಮಾಡುವಾಗ ಆಚಾರ್ಯ ಅನೇಕಾಂತ ಸಾಗರ ಮಹಾರಾಜರು, ಶಾಂತಿ ಮಂತ್ರಗಳನ್ನು ಪಠಿಸಿದರು. ಬಾಹುಬಲಿಗೆ ವಿವಿಧ ಪುಷ್ಪಗಳಿಂದ ತಯಾರಿಸಿದ ಬೃಹತ್ ಸುಂದರ ಹಾರವನ್ನು ಅರ್ಪಿಸಿ ಮಹಾ ಮಂಗಳಾರತಿ ಮಾಡಿ, ಗಂಧೋದಕ ವಿತರಿಸಲಾಯಿತು.

ಪೂಜೆಯ ನೇತೃತ್ವವನ್ನು ನಂದಕುಮಾರ್ ಶಾಸ್ತ್ರಿ, ಜಿನೇಶ್ ಕುಮಾರ್ ವಹಿಸಿದ್ದರು. ಪೂಜಾ ಸೇವಾ ಕರ್ತರಾಗಿ ಉತ್ತರ ಕರ್ನಾಟಕದ ಹಜಾರೆ ಟೆಕ್ಸ್‌ಟೈಲ್ಸ್‌ನವರು ವಹಿಸಿದ್ದರು.

ಸಾನಿಧ್ಯ ವಹಿಸಿದ್ದ ಆಚಾರ್ಯ ಅನೇಕಾಂತಸಾಗರ ಮಹಾರಾಜರು, ಕಂಬದಹಳ್ಳಿ ಜೈನ ಮಠದ ಭಾನುಕೀರ್ತಿ ಸ್ವಾಮೀಜಿ ಆಶೀರ್ವಚನ ನೀಡಿದರು. ಅನುಪಮ ಸಾಗರ ಮಹಾರಾಜ, ಆತ್ಮೀಯ ಸಾಗರ ಮಹಾರಾಜ, ಅರಹಂತಸಾಗರ ಮಹಾರಾಜ, ಆರ್ಯಿಕೆಯರಾದ ಅಬೇ ಧಮತಿ ಮಾತಾಜಿ, ನಿರ್ಮಲ್ ಮತಿ ಮಾತಾಜಿ, ಅಜಿತ್ ಮತಿ ಮಾತಾಜಿ ಮತ್ತು ಸಂಘಸ್ಥ ತ್ಯಾಗಿಗಳು ಸಾನಿಧ್ಯ ವಹಿಸಿದ್ದರು.

CMYK CMYK CMYK CMYK

ಪಶ್ಚಿಮ ಏಷ್ಯಾ ಬಿಕ್ಕಟ್ಟು ಸವಾಲು : ಮೋದಿ

• ಪ್ರಜೋದಯ ವರದಿ

ನವದೆಹಲಿ : ಪಶ್ಚಿಮ ಏಷ್ಯಾ ಬಿಕ್ಕಟ್ಟು ನಿಸ್ಸಂದೇಹವಾಗಿ ಸವಾಲಿನ ಸಮಯ. ಇದರಿಂದ ಜಾಗತಿಕ ಇಂಧನ ಪೂರೈಕೆಯ ಮೇಲೆ ಪರಿಣಾಮ ಬೀರಿದೆ. ಇಂತಹ ಸಮಯದಲ್ಲಿ, ಪರಿಸ್ಥಿತಿಗಳನ್ನು ರಾಜಕೀಯಗೊಳಿಸಬಾರದು. ಜೊತೆಗೆ ವದಂತಿಗಳಿಗೆ ಜನರು ಕಿವಿಗೊಡಬಾರದು, ದೇಶದ ನಾಗರಿಕರು ಒಗ್ಗಟ್ಟಿನಿಂದ ಇರಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಮನವಿ ಮಾಡಿದ್ದಾರೆ.

ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್ ನ 132 ನೇ ಸಂಚಿಕೆಯನ್ನುದ್ದೇಶಿಸಿ ಮಾತನಾಡಿದ ಅವರು, ವದಂತಿಗಳ ಹರಡುವಿಕೆಯ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿ, ತಪ್ಪು ಮಾಹಿತಿ ಪ್ರಸಾರ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹಾನಿ ಮಾಡುತ್ತದೆ. ಹೀಗಾಗಿ ಸರ್ಕಾರದ ಅಧಿಕೃತ ಸಂಪರ್ಕ ಮಾತ್ರ ಜನರು ನಂಬಬೇಕು. ನಾಗರಿಕರು ಒಗ್ಗಟ್ಟಿನಿಂದ ಇದ್ದು ಸವಾಲನ್ನು ಜಯಿಸಬೇಕು. ಈ ವಿಷಯದ ಬಗ್ಗೆ ರಾಜಕೀಯ ಮಾಡುವವರು ದೂರವಿರಬೇಕು ಎಂದಿದ್ದಾರೆ.

ಭಾರತದ ಇಂಧನ ಅಗತ್ಯಗಳನ್ನು ಪೂರೈಸುವಲ್ಲಿ ಮಧ್ಯಪ್ರಾಚ್ಯ ನಿರ್ಣಾಯಕ ಪಾತ್ರ ವಹಿಸುತ್ತದೆ. ಯುದ್ಧ ನಡೆಯುತ್ತಿರುವ ಪ್ರದೇಶ ಇಂಧನ ಅಗತ್ಯಗಳ ಪ್ರಮುಖ ಕೇಂದ್ರವಾಗಿದೆ. ಇದರಿಂದಾಗಿ ಪೆಟ್ರೋಲ್ ಮತ್ತು ಡೀಸೆಲ್ ಬಿಕ್ಕಟ್ಟು ವಿಶ್ವಾದ್ಯಂತ ಹೆಚ್ಚಿದೆ. ಜಾಗತಿಕ ಸಂಬಂಧಗಳು, ವಿವಿಧ ದೇಶಗಳಿಂದ ಬಂದ ನೆರವು ಮತ್ತು ಕಳೆದ ದಶಕದಲ್ಲಿ ಅದು ನಿರ್ಮಿಸಿರುವ ಸಾಮರ್ಥ್ಯಗಳಿಂದಾಗಿ ಭಾರತ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದೆ ಎಂದಿದ್ದಾರೆ.

ದೇಶದ 140 ಕೋಟಿ ನಾಗರಿಕರ ಹಿತಾಸಕ್ತಿಗಳಿಗೆ ಸಂಬಂಧಿಸಿದೆ. ಇದರಲ್ಲಿ ಸ್ವಾರ್ಥ ರಾಜಕೀಯಕ್ಕೆ ಅವಕಾಶವಿಲ್ಲ, ವದಂತಿಗಳನ್ನು ಹರಡುವವರು ದೇಶಕ್ಕೆ ದೊಡ್ಡ ಹಾನಿಯನ್ನುಂಟು ಮಾಡುತ್ತಿದ್ದಾರೆ, ಎಲ್ಲರೂ ಜಾಗರೂಕರಾಗಿರಿ ಮತ್ತು ತಪ್ಪು ಮಾಹಿತಿಯಿಂದ ದಾರಿ ತಪ್ಪಬೇಡಿ ಎಂದು ಮನವಿ ಮಾಡಿದ್ದಾರೆ.

1 ಕೋಟಿ ಭಾರತೀಯರ ರಕ್ಷಣೆಗೆ ಧನ್ಯವಾದ

ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ನಡೆಯುತ್ತಿರುವ ಸಂಘರ್ಷದ ಸಮಯ ಜಗತ್ತಿನಲ್ಲಿ ಕೋವಿಡ್ ಸೋಂಕಿನ ಸಂದರ್ಭ ನೆನಪು ಮಾಡಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಗಲ್ಫ್ ರಾಷ್ಟ್ರಗಳಲ್ಲಿ ಒಂದು ಕೋಟಿಗೂ ಅಧಿಕ ಭಾರತೀಯರನ್ನು ಬೆಂಬಲಿಸಿದ ಆ ದೇಶಗಳ ಮುಖ್ಯಸ್ಥರಿಗೆ ಧನ್ಯವಾದ ಹೇಳುವುದಾಗಿ ತಿಳಿಸಿದ್ದಾರೆ.

ಮಾರ್ಚ್ ತಿಂಗಳು ಜಾಗತಿಕ ಮಟ್ಟದಲ್ಲಿ ಅತ್ಯಂತ ಸಂಘರ್ಷದ ತಿಂಗಳಾಗಿದೆ. ಕೋವಿಡ್ ಸಮಯದಲ್ಲಿ ಜಗತ್ತು ದೀರ್ಘಕಾಲದವರೆಗೆ ಹಲವಾರು ಸಮಸ್ಯೆ ಎದುರಿಸುವುದನ್ನು ನೆನಪು ಮಾಡಿದೆ. ಕೋವಿಡ್ ಬಿಕ್ಕಟ್ಟಿನಿಂದ ಹೊರಬಂದ ನಂತರ, ಜಗತ್ತು ಹೊಸ ಆರಂಭದೊಂದಿಗೆ ಪ್ರಗತಿಯ ಹಾದಿಯಲ್ಲಿ ಮುಂದುವರಿಯುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು. ಆದಾಗ್ಯೂ, ವಿವಿಧ ಪ್ರದೇಶಗಳಲ್ಲಿ, ಯುದ್ಧ ಮತ್ತು ಸಂಘರ್ಷದ ಪರಿಸ್ಥಿತಿಗಳು ಅದೇ ಸ್ಥಿತಿ ನಿರ್ಮಾಣ ಮಾಡಿವೆ ಎಂದು ತಿಳಿಸಿದ್ದಾರೆ.

ನಮ್ಮ ನೆರೆಹೊರೆಯಲ್ಲಿ ಕಳೆದ ಒಂದು ತಿಂಗಳಿನಿಂದ ಭೀಕರ ಯುದ್ಧ ನಡೆಯುತ್ತಿದೆ. ಲಕ್ಷಾಂತರ ಭಾರತೀಯ ಕುಟುಂಬಗಳ ಸಂಬಂಧಿಕರು ಈ ದೇಶಗಳಲ್ಲಿ, ವಿಶೇಷವಾಗಿ ಗಲ್ಫ್ ರಾಷ್ಟ್ರಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ಕೆಲಸ ಮಾಡುತ್ತಿದ್ದಾರೆ. ಅಲ್ಲಿನ ಒಂದು ಕೋಟಿಗೂ ಹೆಚ್ಚು ಭಾರತೀಯರಿಗೆ ಎಲ್ಲಾ ರೀತಿಯ ಸಹಾಯವನ್ನು ಒದಗಿಸಿದ್ದಕ್ಕಾಗಿ ಗಲ್ಫ್ ರಾಷ್ಟ್ರಗಳಿಗೆ ತುಂಬಾ ಕೃತಜ್ಞನಾಗಿದ್ದೇನೆಂದು ಹೇಳಿದ್ದಾರೆ.

ತಂತ್ರಜ್ಞಾನ, ಸಾಮಾಜಿಕ ಜಾಗೃತಿ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ಅಭಿಪ್ರಾಯ ಹಂಚಿಕೊಂಡ ಪ್ರಧಾನಿ, ಜಾಗತಿಕ ನಾಯಕರು ಮತ್ತು ತಂತ್ರಜ್ಞಾನ ಸಿಇಒಗಳನ್ನು ಭೇಟಿಯಾದ 2026 ರ ಎಐ ಇಂಪ್ಯಾಕ್ಟ್ ಶೃಂಗಸಭೆಯ ವಿಶ್ವ ನಾಯಕರಿಗೆ ಹಲವಾರು ವಿಷಯಗಳನ್ನು ತೋರಿಸಿದೆ. ಪ್ರಾಣಿಗಳ ಚಿಕಿತ್ಸೆಯಲ್ಲಿ ಎಐ ಹೇಗೆ ಸಹಾಯ ಮಾಡುತ್ತಿದೆ ಎನ್ನುವುದನ್ನು ನಿರೂಪಿಸಿದೆ ಎಂದರು

ಶೂನ್ಯ ದೋಷ, ಉನ್ನತ-ಗುಣಮಟ್ಟದ ಉತ್ಪನ್ನಗಳನ್ನು ಗುರಿಯಾಗಿಟ್ಟುಕೊಂಡು ಭಾರತೀಯ ತಯಾರಕರು ಮತ್ತು ಸ್ಟಾರ್ಟ್-ಅಪ್‌ಗಳು ಗುರಿ ಹೊಂದುವ ಅಗತ್ಯವಿದೆ ಎಂದು ಹೇಳಿದ ಅವರು ಭಾರತ ಜಾಗತಿಕವಾಗಿ ಗೌರವಿಸಲ್ಪಟ್ಟ ಮತ್ತು ಮೌಲ್ಯಯುತವಾದ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಬೇಕು, ನಾವೀನ್ಯತೆಯ ಕೇಂದ್ರವಾಗಿ ದೇಶದ ಸ್ಥಾನವನ್ನು ಬಲಪಡಿಸಬೇಕು ಎಂದು ಹೇಳಿದ್ದಾರೆ.

ದೇಶಾದ್ಯಂತ ಹಸ್ತಪ್ರತಿ ಸಂಗ್ರಹ

ದೇಶಾದ್ಯಂತ ಹಸ್ತಪ್ರತಿಗಳನ್ನು ದಾಖಲಿಸುವ ಮತ್ತು ಸಂರಕ್ಷಿಸುವ ಗುರಿಯನ್ನು ಜ್ಞಾನ ಭಾರತಂ ಆಪ್ ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಜ್ಞಾನ ಭಾರತಂ ಸಮೀಕ್ಷೆ ಭಾರತದ ಶ್ರೀಮಂತ ಹಸ್ತಪ್ರತಿ ಪರಂಪರೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸುತ್ತದೆ. ನಾಗರಿಕರು ತಾವು ಹೊಂದಿರುವ ಅಥವಾ ತಿಳಿದಿರುವ ಯಾವುದೇ ಹಸ್ತಪ್ರತಿಗಳ ಛಾಯಾಚಿತ್ರಗಳು ಅಥವಾ ವಿವರಗಳನ್ನು ಅಪ್ಲಿಕೇಶನ್ ಮೂಲಕ ಅಪ್‌ಲೋಡ್ ಮಾಡುವ ಮೂಲಕ ಸಹಕಾರ ನೀಡುವಂತೆ ಮನವಿ ಮಾಡಿದ್ದಾರೆ.

ಪ್ರತಿಯೊಂದು ಸಲ್ಲಿಕೆಯನ್ನು ದಾಖಲಿಸುವ ಮೊದಲು ಸರಿಯಾದ ಪರಿಶೀಲನೆಗೆ ಒಳಗಾಗುತ್ತದೆ ಮತ್ತು ಸಾವಿರಾರು ಹಸ್ತಪ್ರತಿಗಳನ್ನು ಜನರು ಈಗಾಗಲೇ ಹಂಚಿಕೊಂಡಿದ್ದಾರೆ, ದುಹ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಸಾಮೂಹಿಕ ಪ್ರಯತ್ನವನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ.

ಬಾಗಿಲು ಹಾಕಿ ಪೂಜೆ ಮಾಡುವ ಪರಿಸ್ಥಿತಿ ನಿರ್ಮಾಣ

» ಮೊದಲನೇ ಪುಟದಿಂದ

ಪ್ರಭಾವಿಗಳಿಂದ ಕರೆ ಮಾಡಿಸುತ್ತಾರೆ

ಪೂಜೆ ಮುಗಿಸಿದ ಬಳಿಕ ನಾನು ಗೇಟ್‌ಗೆ ಬೀಗ ಹಾಕಿಕೊಂಡು ಹೋದರೆ ಈ ಛಾಯಾ ಗ್ರಾಹಕರು ಪ್ರಭಾವಿಗಳಿಂದ ಕರೆ ಮಾಡಿಸು ತ್ತಾರೆ. ಇತ್ತೀಚೆಗೆ ಬೆಂಗಳೂರಿನ ಜಿಲ್ಲಾಧಿಕಾರಿ ಯೊಬ್ಬರು ಇಲ್ಲಿನ ಅಧಿಕಾರಿಯಿಂದ ಕರೆ ಮಾಡಿಸಿ ಗೇಟ್ ಬಾಗಿಲು ತೆಗೆಸಿದರು. ಹೀಗಾ ದರೆ ಹಿಂದೂ ದೇವಾಲಯಗಳ ಪರಿಸ್ಥಿತಿ ಏನಾಗಬೇಕೆಂದರು.

ಸಿಸಿಟಿವಿ ಅಳವಡಿಕೆಗೆ ಆಗ್ರಹ

ಬೆಟ್ಟದ ಭೈರವೇಶ್ವರ ದೇವಾಲಯದ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ದೇಗುಲದ ಆವರಣದಲ್ಲಿ ಪ್ರೀ ವೆಡ್ಡಿಂಗ್ ಸೇರಿ ಎಲ್ಲಾ ರೀತಿಯ ಚಿತ್ರೀಕರಣ ನಿಷೇಧಿಸಬೇಕು ಹಾಗು ಸಿಸಿಟಿವಿ ಕ್ಯಾಮರಾ ಅಳವಡಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು.

ಇತ್ತೀಚಿನ ದಿನಗಳಲ್ಲಿ ಪ್ರಿ ವೆಡ್ಡಿಂಗ್ ಫೋಟೋ ಶೂಟ್ ಹಾಗು ಪ್ರವಾಸೋದ್ಯಮದ ಹೆಸರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದಾರೆ. ದೇವಾಲಯದ ಪಾವಿತ್ರ್ಯತೆ ಕಾಪಾಡುವ ನಿಟ್ಟಿನಲ್ಲಿ ಸ್ಥಳೀಯ ಗ್ರಾಮಸ್ಥರು ವಿಧಿಸಿರುವ ನಿಯಮಗಳನ್ನು ಅನೇಕ ಪ್ರವಾಸಿಗರು ಪಾಲಿಸುತ್ತಿಲ್ಲ. ಇದು ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ. ದೇವಸ್ಥಾನದ ಆವರಣದಲ್ಲಿ ಫೋಟೋ ಶೂಟ್ ನಿಷೇಧಿಸಲು ತಾಲ್ಲೂಕು ಆಡಳಿತ ತಕ್ಷಣ ಕ್ರಮ ಕೈಗೊಳ್ಳಬೇಕು. ಸುರಕ್ಷತೆಯ ದೃಷ್ಟಿಯಿಂದ ದೇವಸ್ಥಾನದ ಸುತ್ತಮುತ್ತ ಸಿಸಿಟಿವಿ ಕ್ಯಾಮರಾ ಅಳವಡಿಸಿ, ಭದ್ರತಾ ಸಿಬ್ಬಂದಿ ನಿಯೋಜಿಸಬೇಕು. ದೇವಾಲಯದ ಆವರಣಕ್ಕೆ ಯಾರೂ ಪಾದರಕ್ಷೆ ಧರಿಸಿ ಪ್ರವೇಶಿ ಸಬಾರದೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಹಿಂದೂ ಹಿತ ರಕ್ಷಣಾ ವೇದಿಕೆ ಮುಖಂಡರಾದ ರಘು ಸಕಲೇಶಪುರ, ಕೌಶಿಕ್, ಧರ್ಮೇಶ್, ಶಿವು ಜಿಪ್ಪಿ, ವಿನೋದ್ ಕಣಚೂರು, ಪೃಥ್ವಿ ಅವರೇಕಾಡು, ಹುರುಡಿ ವಿಕ್ರಂ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಭರತ್, ಗ್ರಾಮಸ್ಥರಿದ್ದರು.

ಸಾರ್ವಜನಿಕರು ಆರೋಗ್ಯ ಶಿಬಿರದ ಪ್ರಯೋಜನ ಪಡೆಯಿರಿ

• ಪ್ರಜೋದಯ ವರದಿ

ಆಲೂರು: ಒತ್ತಡದ ಜೀವನದಿಂದಾಗಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿವೆ. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಆರೋಗ್ಯ ಉಚಿತ ತಪಾಸಣಾ ಶಿಬಿರ ಸಹಕಾರಿಯಾಗಿವೆ ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಿ.ಎಸ್. ಸತೀಶ್ ಅವರು ತಿಳಿಸಿದರು.

ತಾಲ್ಲೂಕಿನ ಧರ್ಮಪುರಿ ಗ್ರಾಮದಲ್ಲಿ ಆಲೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ನಡೆದ ವಿಶೇಷ ವಾರ್ಷಿಕ ಶಿಬಿರದಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಮತ್ತು ಆರೋಗ್ಯ ಜಾಗೃತಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬದಲಾದ ಜೀವನ ಶೈಲಿಯಿಂದ ಮಕ್ಕಳಲ್ಲಿ ರಕ್ತದೊತ್ತಡ, ಮಧುಮೇಹ ಮೊದಲಾದ ಖಾಯಿಲೆಗಳು ಕಾಣಿಸಿಕೊಳ್ಳುತ್ತಿರುವುದು ಆತಂಕದ ವಿಷಯ. ಹೀಗಾಗಿ ಕಾಲಕಾಲಕ್ಕೆ ಪರೀಕ್ಷೆಗಳಿಗೆ ಒಳಗಾಗಿ ವೈದ್ಯರ ಸಲಹೆ ಪಡೆದು ಕೊಳ್ಳಬೇಕು. ಸರಿಯಾದ ಆಹಾರ ಮತ್ತು ವ್ಯಾಯಾಮ ಪದ್ಧತಿಯಿಂದ ಆರೋಗ್ಯಕರ ಜೀವನ ನಡೆಸಬಹುದು. ದೈಹಿಕ, ಮಾನಸಿಕ, ಸಾಮಾಜಿಕ ಸದೃಢತೆಯನ್ನು ಆರೋಗ್ಯವೆಂದು ಕರೆಯಲಾಗುತ್ತದೆ. ರೋಗಗಳಲ್ಲಿ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ಎಂಬ ರೋಗಗಳಿವೆ. ಅಸಾಂಕ್ರಾಮಿಕ ರೋಗಗಳು ಸಂಪೂರ್ಣ ವಾಸಿಯಾಗುವುದಿಲ್ಲ, ಅವುಗಳನ್ನು ನಿಯಂತ್ರಣದಲ್ಲಿಟ್ಟು ಬೇಕೆಂದು ಸಲಹೆ ನೀಡಿದರು.

ಹಿರಿಯ ಆರೋಗ್ಯ ನಿರೀಕ್ಷಕ ರಾಜು, ಆರೋಗ್ಯ ನಿರೀಕ್ಷಕ ಮಂಜು, ಐಸಿಟಿಸಿ ಆಪ್ತ ಸಮಾಲೋಚಕಿ ಗೌರಿ, ಎನ್‌ಸಿಡಿ ಸಮಾಲೋಚಕ ರವಿ, ಪ್ರಯೋಗಾಲಯ ತಂತ್ರಜ್ಞರಾದ ಸುಮಿತ್ರ, ಸುಪ್ರಿಯ, ಆಶಾ ಕಾರ್ಯಕರ್ತರಾದ ನೇತ್ರಾವತಿ, ಪ್ರಾಧ್ಯಾಪಕ ಟಿ.ಕೆ ಶ್ರೀನಿವಾಸ, ಶಿಬಿರಾಧಿಕಾರಿ ಡಾ.ಪಿ.ಕೆ ರಾಘವೇಂದ್ರ, ಉಪನ್ಯಾಸಕರಾದ ರಶ್ಮಿತ, ಭವ್ಯ, ಕಾಲೇಜು ಸಿಬ್ಬಂದಿ, ಧರ್ಮಪುರಿ ಗ್ರಾಮಸ್ಥರು ಹಾಗು ಎನ್‌ಎಸ್‌ಎಸ್ ಸ್ವಯಂ ಸೇವಕರರು ಉಪಸ್ಥಿತರಿದ್ದರು.

ಚನ್ನಕೇಶವ ಸ್ವಾಮಿ ರಥೋತ್ಸವ ಯಶಸ್ಸಿಗೆ ಸಹಕರಿಸಿ

• ಪ್ರಜೋದಯ ವರದಿ

■ ಶಾಂತಿ ಸಭೆಯಲ್ಲಿ ದೇಗುಲ ಆಡಳಿತಾಧಿಕಾರಿ ಮಂಜುನಾಥ್ ಮನವಿ

ಬೇಲೂರು: ದೇಶಾದ್ಯಂತ ಪ್ರಸಿದ್ಧಿ ಪಡೆದಿರುವ ಚನ್ನಕೇಶವ ಸ್ವಾಮಿ ರಥೋತ್ಸವ ಯಶಸ್ಸಿಗೆ ಎಲ್ಲರ ಸಹಕಾರ ಬೇಕಿದ್ದು, ಯಾವುದೇ ಸಮಸ್ಯೆ ಕಂಡುಬಂದರೆ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ಉಪವಿಭಾಗಾಧಿಕಾರಿ ಹಾಗು ದೇಗುಲದ ಆಡಳಿತಾಧಿಕಾರಿ ಮಂಜುನಾಥ್ ಅವರ ಹೇಳಿದರು.

ಮಾ.31 ಹಾಗು ಏ. 1ರಂದು ನಡೆಯಲಿರುವ ರಥೋತ್ಸವ ಹಿನ್ನಲೆಯಲ್ಲಿ ದೇವಾಲಯ ಆವರಣದಲ್ಲಿ ನಡೆದ ವಿವಿಧ ಸಂಘಟನೆಗಳು, ಧಾರ್ಮಿಕ ಮುಖಂಡರೊಂದಿಗಿನ ಶಾಂತಿ ಸಭೆಯಲ್ಲಿ ಮಾತನಾಡಿ, ಜಾತ್ರಾ ಮಹೋತ್ಸವ ಯಶಸ್ಸಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಏನಾದರೂ ಸಮಸ್ಯೆಗಳಿದ್ದರೆ ನಮ್ಮ ಗಮನಕ್ಕೆ ತರಬೇಕು. ವಿನಾಕಾರಣ ಗೊಂದಲ ಸೃಷ್ಟಿಸುವುದು ಬೇಡ. ಅಧಿಕಾರಿ ವರ್ಗ ಸಹ ಸಮಾಧಾನ ಚಿತ್ತದಿಂದ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಮಾತನಾಡಿ, ಮಾ. 23ರಿಂದ ಜಾತ್ರೆ ಆರಂಭವಾಗಿದೆ. ವಿವಿಧ ಉತ್ಸವಗಳು ನಡೆಯುತ್ತಿದ್ದು, ಭಕ್ತರು ಸಂತೋಷದಿಂದ ಪಾಲ್ಗೊಳ್ಳುತ್ತಿದ್ದಾರೆ. ಎಲ್ಲರ ಅಭಿಪ್ರಾಯದಂತೆ ಪಟ್ಟಣದ ಪ್ರಮುಖ ರಸ್ತೆ ಹಾಗು ದೇಗುಲಕ್ಕೆ ದೀಪಾಲಂಕಾರ ಮಾಡಲಾಗಿದೆ. ರಥೋತ್ಸವದಂದು ಸಾವಿರಾರು ಭಕ್ತರು ಬರುವುದರಿಂದ ಕುಡಿಯುವ ನೀರು, ಸ್ವಚ್ಛತೆ, ತಾತ್ಕಾಲಿಕ ಶೌಚಗೃಹ, ವಾಹನ ನಿಲುಗಡೆ, ಆರೋಗ್ಯ ಸೇವೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಕಲ್ಯಾಣಿ ಸಮೀಪ ಭಕ್ತರ ಅನುಕೂಲಕ್ಕಾಗಿ ಅಗ್ನಿ ಶಾಮಕ ದಳ ಮತ್ತು ಗೃಹ ರಕ್ಷಕ ದಳದ ಸಿಬ್ಬಂದಿ ನೇಮಿಸಲಾಗಿದೆ ಎಂದರು.

ಸಂಚಾರ ದಟ್ಟಣೆ ನಿಯಂತ್ರಣ ಉದ್ದೇಶದಿಂದ ಜೂನಿಯರ್ ಕಾಲೇಜು ಆವರಣ, ದೇವಾಲಯದ ಹಿಂಭಾಗ, ಸಂತೆ ಮೈದಾನ, ಚನ್ನಕೇಶವ ವಸತಿ ನಿಲಯ, ಕೆಂಪೇಗೌಡ ರಸ್ತೆ ಪಕ್ಕದಲ್ಲಿ ವಾಹನ ನಿಲುಗಡೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು.

ಅರಸೀಕೆರೆ ಡಿವೈಎಸ್‌ಪಿ ಗೋಪಿ ಅವರು ಮಾತಾನಾಡಿ, ಅಹಿತಕರ ಘಟನೆ ನಡೆಯದಂತೆ ಕ್ರಮ ವಹಿಸಿದ್ದು, ಏನಾದರೂ ಅಹಿತಕರ ಘಟನೆಗಳು ಕಂಡುಬಂದರೆ ಪೊಲೀಸರ ನೆರವು ಪಡೆಯಬೇಕು. ರಥ ಎಳೆಯುವಾಗ ಸಾರ್ವಜನಿಕರು ಸಂಯಮದಿಂದ ವರ್ತಿಸಬೇಕೆಂದರು.

ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ ಅವರು ಮಾತನಾಡಿ, ಭಕ್ತರ ಅನುಕೂಲಕ್ಕಾಗಿ ಎಲ್ಲಾ ಕ್ರಮ ಕೈಗೊಳ್ಳಬೇಕು. ಅನಗತ್ಯ ಗೊಂದಲ ಸೃಷ್ಟಿಯಾದಾಗ ಪೊಲೀಸರ ಗಮನಕ್ಕೆ ತರಬೇಕು. ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚು ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ಸರಗಳ್ಳತನಕ್ಕಿಂತ ಮೊಬೈಲ್ ಕಳವು ಜಾಸ್ತಿಯಾಗಿದ್ದು, ಇಎಂಇಐ ನಂಬರ್ ಇದ್ದರೂ ಕಂಡು ಹಿಡಿಯಲು ಸಾಧ್ಯವಾಗುತ್ತಿಲ್ಲ, ರಥ ಎಳೆಯುವಾಗ ಜಾಗರೂಕತೆಯಿಂದ ಇರಬೇಕು. ಭದ್ರತೆ ದೃಷ್ಟಿಯಿಂದ ಪೊಲೀಸ್ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ವೀರಾಂಜನೇಯ ಸೇವಾ ಸಮಿತಿ ಅಧ್ಯಕ್ಷ ಮೋಹನ್ ಅವರು ಮಾತನಾಡಿ, ರಥೋತ್ಸವದಂದು ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರು ಸೇರಿ ಭಕ್ತರಿಗೆ ಮೂಲಸೌಕರ್ಯ ಒದಗಿಸಲು ಕೋರಿದರು. ಪುರಸಭೆ ಸದಸ್ಯ ಜಮಾಲ್ ಅವರು ಮಾತನಾಡಿದರು. ಚನ್ನಕೇಶವಸ್ವಾಮಿ ದೇಗುಲ ಕಾರ್ಯನಿರ್ವಹಣಾಧಿಕಾರಿ ಯೋಗೇಶ್, ಮುಖಂಡರಾದ ನಾಗೇಶ್, ವೆಂಕಟೇಶ್, ಅಬ್ದುಲ್‌ಖಾದರ್, ಮಹೇಶ್ ಇತರರಿದ್ದರು.

ಸೌದೆ ಒಲೆಗಳನ್ನು ಬಳಸಲು ಮನವಿ

• ಪ್ರಜೋದಯ ವರದಿ



ಬೆಂಗಳೂರು : ಗಲ್ಫ್ ಯುದ್ಧವೂ 30ನೇ ದಿನಕ್ಕೆ ಕಾಲಿಟ್ಟಿದ್ದರೆ, ಇತ್ತ ಕರುನಾಡಲ್ಲಿ ಸಮರದ ಎಫೆಕ್ಟ್ ಬೀರಿದ್ದು, ಅಡುಗೆ ಅನಿಲ ಅಭಾವ ಮುಂದುವರಿದಿದೆ. ವಾಣಿಜ್ಯ ಸಿಲಿಂಡರ್ ಸಿಗದೇ ಹೋಟೆಲ್, ಕೈಗಾರಿಕೆಗಳು ಥಂಡಾ ಹೊಡೆದಿವೆ. ಜನರು ಖಾಲಿ ಗ್ಯಾಸ್ ಸಿಲಿಂಡರ್ ಹಿಡಿದು ಏಜೆನ್ಸಿಗಳತ್ತ ಧಾವಿಸುತ್ತಿದ್ದಾರೆ. ಈ ಮಧ್ಯೆ ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಸಿಲಿಂಡರ್ ಅಭಾವ ಇರುವುದರಿಂದ ಸೌದೆ ಒಲೆ ಬಳಸುವಂತೆ ಕರೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಲಿಂಡರ್ ಅಭಾವ ಇರುವುದರಿಂದ ಹಳ್ಳಿ ಭಾಗದ ಜನರು ಸೌದೆ ಒಲೆಗಳನ್ನು ಬಳಸಿ. ಬೆಂಗಳೂರು ಬಿಟ್ಟು 40 ಕಿಲೋ ಮೀಟರ್ ಹೋದರೆ ಸೌದೆ ಸಿಗುತ್ತೆ. ಅರಣ್ಯ ಪ್ರದೇಶದ ಹಸಿ ಮರ ಬಿಟ್ಟು ಒಣ ಕಟ್ಟಿಗೆ ಬಳಸುವಂತೆ ಅವರು ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಸಿಲಿಂಡರ್ ಕೊರತೆಗೆ ಕೇಂದ್ರ ಸರ್ಕಾರವೇ ಕಾರಣ. ಡಿಸ್ಟ್ರಿಬ್ಯೂಟರ್‌ಗಳ ಮೇಲೆ ದೂರು ಬರುತ್ತಿವೆ. ಡೊಮೆಸ್ಟಿಕ್ ಸಿಲಿಂಡರ್ ಈ ಹಿಂದಿನಂತೆ ಮುಂದುವರಿಯುತ್ತೆ. ಆಯಿಲ್ ಕಂಪನಿಗಳಿಗೆ ಸರ್ಕಾರ ಈಗಾಗಲೇ ಸೂಚನೆ ನೀಡಿದೆ. ಸಕಾಲಕ್ಕೆ ಗ್ರಾಹಕರ ಮನೆ ಬಾಗಿಲಿಗೆ ಸಿಲಿಂಡರ್ ತಲುಪಿಸಬೇಕು. ನೀವು ಬುಕ್ಕಿಂಗ್ ಮಾಡಿದ್ದರೆ ಮನೆಗೆ ಸಿಲಿಂಡರ್ ಬರುತ್ತೆ. ಈಗ 40% ಸಿಲಿಂಡರ್ ಪೂರೈಕೆ ಆಗುತ್ತಿದೆ ಎಂದರು.

ರಾಜ್ಯಕ್ಕೆ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪೂರೈಕೆಯನ್ನು ಶೇ.68 ಗೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾ ರವು ಇಂದಿನಿಂದಲೇ ಹೆಚ್ಚುವರಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಿತರಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳು, ವಸತಿ ನಿಲಯಗಳು, ಆಸ್ಪತ್ರೆ ಮತ್ತು ಇತರೆ ಅವಶ್ಯಕ ಸಂಸ್ಥೆಗಳಿಗೆ 4200 ಸಿಲಿಂಡರ್ ಹಂಚಿಕೆ ಮಾಡಲಾಗಿದೆ. ಸರ್ಕಾರಿ, ಪಿಎಸ್‌ಯು ಸಂಸ್ಥೆಗಳು, ವಿಮಾನ ನಿಲ್ದಾಣ, ರೈಲು, ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳಿಗೆ 1200 ಸಿಲಿಂಡರ್ ಹಂಚಲಾಗಿದೆ. ಹೋಟೆಲ್, ಡಾಬಾ, ರೆಸ್ಟೋರೆಂಟ್, ಕ್ಯಾಂಟೀನ್, ಕೆಫೆ, ಬೇಕರಿ, ಸಮುದಾಯ ಅಡುಗೆ ಕೇಂದ್ರಗಳು, ಪಿ.ಜಿ, ಫುಡ್ ವಸ್ತು ನಿಲಯಗಳಿಗೆ 17500 ಸಿಲಿಂಡರ್, ಬೀಜ ಸಂಸ್ಕರಣೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು, ಜೈವೋದ್ಯಮ, ಮೀನುಗಾರಿಕೆ, ಕೋಳಿ ಸಾಕಣೆ, ರೇಷ್ಮೆ ಹುಳು ಸಾಕಣೆ ಕೇಂದ್ರಗಳಿಗೆ 6000, ಇತರ ಅವಶ್ಯಕತೆ ಆಧಾರದ ಮೇಲೆ 563 ಸಿಲಿಂಡರ್ ಸೇರಿ ಒಟ್ಟು 29463 ಕಮರ್ಷಿಯಲ್ ಸಿಲಿಂಡರ್ ನಿತ್ಯ ವಿತರಿಸಲಾಗುತ್ತಿದೆ.

ಕೆಲವು ಅನಿಲ ವಿತರಕರು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಸಿಲಿಂಡರ್ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ನಮಗೆ ದೂರುಗಳು ಬಂದಿವೆ. ಎಲ್ಲಾ ವಿತರಕರು ಕಡ್ಡಾಯವಾಗಿ ಸರ್ಕಾರ ನಿಗದಿಪಡಿಸಿದ ದರದಲ್ಲೇ ಸಿಲಿಂಡರ್ ವಿತರಿಸಬೇಕು. ಹೆಚ್ಚುವರಿ ದರ ವಸೂಲಿ ಮಾಡಿದರೆ ಕಾನೂನು ಕ್ರಮಕೈಗೊಳ್ಳುವುದರ ಮೂಲಕ ಪರವಾನಗಿ ರದ್ದು ಮಾಡಲಾಗುವುದು. ಸಿಲಿಂಡರ್ ಅಕ್ರಮ ದಾಸ್ತಾನು ಸಂಬಂಧ 1169 ಕೇಸ್ ದಾಖಲಾಗಿವೆ. ವಾಣಿಜ್ಯ ಉದ್ದೇಶಕ್ಕೆ ಬಳಸ್ತಿದ್ದ 1603 ಸಿಲಿಂಡರ್ ವಶಪಡಿಸಿಕೊಳ್ಳಲಾಗಿದೆ ಎಂದು ಸಚಿವ ಮುನಿಯಪ್ಪ ಹೇಳಿದ್ದಾರೆ.

ಕೊಗೋಡು ಭಾಗದಲ್ಲಿ ಮತ್ತೆ ಕಾಡಾನೆಗಳ ಪ್ರತ್ಯಕ್ಷ

» ಮೊದಲನೇ ಪುಟದಲ್ಲಿ

ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚರಿಸುತ್ತಿವೆ. ಅನಿರೀಕ್ಷಿತ ಮರಳುವಿಕೆಯಿಂದ ಗ್ರಾಮಸ್ಥರು ಬೆಚ್ಚಿಬಿದ್ದಿದ್ದಾರೆ. ಕೊಗೋಡು ಸಮೀಪದ ಕಾಫಿ ಎಸ್ಟೇಟ್‌ನಲ್ಲಿ ಸುಮಾರು 16 ಆನೆಗಳ ಹಿಂಡು ಕಂಡು ಬಂದಿದ್ದು, ಅವು ದಿನದ ಹೊತ್ತಲ್ಲಿಯೇ ತೋಟಗಳಲ್ಲಿ ಸುಳಿದಾಡುತ್ತಿವೆ. ಹೀಗಾಗಿ ಕಾಫಿ ಬೆಳೆಗಳಿಗೆ ಹಾನಿ ಉಂಟಾಗುವ ಭೀತಿ ಹೆಚ್ಚಾಗಿದೆ.

ರಾತ್ರಿ ಸಮಯದಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದ್ದು, ಆನೆಗಳು ಹಳ್ಳಿಯ ಸಮೀಪಕ್ಕೂ ಬರುತ್ತಿರುವುದರಿಂದ ಜನರು ಮನೆಗಳಿಂದ ಹೊರಬರಲು ಹೆದರುತ್ತಿದ್ದಾರೆ. ರೈತರು ತೋಟಗಳಿಗೆ ಹೋಗಲು ಸಾಧ್ಯವಾಗದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಮಕ್ಕಳ ಹಾಗು ವೃದ್ಧರ ಸುರಕ್ಷತೆ ಬಗ್ಗೆ ಕುಟುಂಬಗಳು ಆತಂಕ ವ್ಯಕ್ತಪಡಿಸುತ್ತಿವೆ.

ಗ್ರಾಮಸ್ಥರು ಅರಣ್ಯ ಇಲಾಖೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದು, ಆನೆಗಳನ್ನು ಕಾಡಿನೊಳಗೆ ಹಿಮ್ಮೆಟ್ಟಿಸಿ ಜನರಿಗೆ ಭದ್ರತೆ ಒದಗಿಸುವಂತೆ ಆಗ್ರಹಿಸಿದ್ದಾರೆ. ಆನೆಗಳು ರಸ್ತೆ ದಾಟಿದ ವಿಡಿಯೋ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ.

ಚನ್ನರಾಯಪಟ್ಟಣ: ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ರಾಜ್ಯಶಾಸ್ತ್ರದ ಮಹತ್ವ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಹಾಸನದ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಮಹೇಶ್ ಉದ್ಘಾಟಿಸಿದರು. ಪ್ರಾಂಶುಪಾಲ ಡಾ.ಎಂ.ಕೆ. ಮಂಜುನಾಥ, ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥ ಡಾ.ಎನ್.ಟಿ. ನಾಗರಾಜ, ಸಹಾಯಕ ಪ್ರಾಧ್ಯಾಪಕ ಜಿ.ಎಸ್. ಲೋಕೇಶ್ ಭಾಗವಹಿಸಿದ್ದರು.

ಸಿಲಿಂಡರ್ ಬೆನ್ನಲ್ಲೇ ರಸಗೊಬ್ಬರ ಅಭಾವ ಆತಂಕ: ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ

ಹುಬ್ಬಳ್ಳಿ : ಇರಾನ್ ಇಸ್ರೇಲ್, ಅಮೇರಿಕಾ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ನಮ್ಮ ದೇಶದ ಮೇಲೆ ಅನೇಕ ರೀತಿಯ ಪರಿಣಾಮಗಳಾಗುತ್ತಿವೆ. ಈಗಾಗಲೇ ಸಿಲಿಂಡರ್ ಅಭಾವ ಉಂಟಾಗಿದ್ದು, ಆಮದು, ರಫ್ತು ವ್ಯವಹಾರ ಕಡಿಮೆಯಾಗಿರುವುದರಿಂದ ಅನೇಕ ವಸ್ತುಗಳ ಬೆಲೆ ಕೂಡ ಹೆಚ್ಚಾಗುತ್ತಿವೆ. ಇದರ ಜೊತೆಗೆ ಇದೀಗ ರಸಗೊಬ್ಬರಕ್ಕೂ ಅಭಾವ ಉಂಟಾಗುವ ಆತಂಕ ಎದುರಾಗಿದೆ. ಈ ಬಾರಿ ಮುಂಗಾರು ಬಿತ್ತನೆಗೆ ರಸಗೊಬ್ಬರ ಸಿಗುತ್ತೋ, ಇಲ್ಲೋ ಅನ್ನೋ ಆತಂಕ ರೈತರನ್ನು ಕಾಡುತ್ತಿದೆ.

ಕಲ್ಯಾಣ ಮಂಟಪ ಎದುರೇ ಸಂಬಂಧಿಕರ ಹೊಡೆದಾಟ

• ಪ್ರಜೋದಯ ವರದಿ

ಹಾಸನ: ನಗರದ ಅರಳೆಪೇಟೆಯಲ್ಲಿರುವ ಕಲ್ಯಾಣ ಮಂಟಪದಲ್ಲಿ ಭಾನುವಾರ ಮದುವೆ ಸಮಾರಂಭದ ಬಳಿಕ ವಧು-ವರರ ಕಡೆಯವರು ಪರಸ್ಪರ ಹೊಡೆದಾಡಿಕೊಂಡಿರುವ ಘಟನೆ ನಡೆದಿದೆ.

ಹನುಮಂತಪುರದ ವಧು ಹಾಗು ದುದ್ದ ಗ್ರಾಮದ ವರನ ಮದುವೆ ಇದಾಗಿದೆ ಎನ್ನಲಾಗಿದೆ. ಬೆಳಿಗ್ಗೆಯಿಂದ ಶಾಸ್ತ್ರೋಕ್ತವಾಗಿ ನೆರವೇರಿದ ಮದುವೆ ಸಂಜೆ ವೇಳೆಗೆ ವಿಕೋಪಕ್ಕೆ ತಿರುಗಿದೆ. ನವ ಜೋಡಿಗಳನ್ನು ಕಳುಹಿಸುವಾಗ



ಬಾಲಕನೊಬ್ಬ ಸಿಗರೇಟ್ ಸೇದಲು ಮುಂದಾಗಿದ್ದಾನೆ. ಅದನ್ನು ತಡೆದಿದ್ದಕ್ಕೆ ಬಾಲಕನ ಕಡೆಯವರು ಗಲಾಟೆ ಶುರು ಮಾಡಿದ್ದಾರೆ. ಅಷ್ಟಕ್ಕೆ ಎದುರುದಾರರು ಊಟದ ವಿಚಾರ ಮುನ್ನಲೆಗೆ ತಂದು ಗಲಾಟೆ ಮಾಡಿದ್ದಾರೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನೋಡ ನೋಡುತ್ತಿದ್ದಂತೆ ಪರಿಸ್ಥಿತಿ ಕೈ ಮೀರಿ ಮಾರಾಮಾರಿ ನಡೆದಿದೆ. ಎರಡು ಗುಂಪುಗಳಾಗಿ ಹೊಡೆದಾಟ ಶುರುವಾಗಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಠಾಣೆ ಪೊಲೀಸರು ಎರಡೂ ಕಡೆಯವರನ್ನು ಸಮಾಧಾನಪಡಿಸಿ ಕಳುಹಿಸಿದ್ದಾರೆ.

ಮಾ.30ರಂದು ರಾಮ ಕೃಷ್ಣ ಶಿವ ನಾಟಕ ಪ್ರದರ್ಶನ

ಹಾಸನ: ನಗರದ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಮಾ.30ರಂದು ನಿರ್ದಿಗಂತ ತಂಡದಿಂದ ಡಾ.ರಾಮ ಮನೋಹರ ಲೋಹಿಯಾ ಅವರ ಲೇಖನ ಆಧಾರಿತ ರಾಮ ಕೃಷ್ಣ ಶಿವ ನಾಟಕ ಪ್ರದರ್ಶನಗೊಳ್ಳಲಿದೆ. ಮನರಂಜನೆ ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ರಾಮ ಕೃಷ್ಣ ಶಿವ ನಾಟಕವೂ ನೀನಾಸಂ, ರಂಗಾಯಣ ಮುಂತಾದ ಅತ್ಯುತ್ತಮ ತರಬೇತಿ ಸಂಸ್ಥೆಯ ಕಲಾವಿದರಿಂದ ಸೋಮವಾರ ಸಂಜೆ 6 ಗಂಟೆಗೆ ಪ್ರದರ್ಶನಗೊಳ್ಳಲಿದೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ಆಹಾರ ಪದ್ಧತಿ ಮೇಲೆ ನಿರ್ಬಂಧ : ಮಮತಾ ಬ್ಯಾನರ್ಜಿ

• ಪ್ರಜೋದಯ ವರದಿ

ಕೋಲ್ಕತ್ತಾ: ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು, ಮುಂಬರುವ ವಿಧಾನಸಭಾ ಚುನಾವಣೆಯ ನಂತರ ರಾಜ್ಯದಲ್ಲಿ ಕೇಸರಿ ಪಕ್ಷ ಅಧಿಕಾರಕ್ಕೆ ಬಂದರೆ ಜನರ ಆಹಾರ ಪದ್ಧತಿಯ ಮೇಲೆ ನಿರ್ಬಂಧ ವಿಧಿಸುತ್ತದೆ ಎಂದು ಭಾನುವಾರ ಆರೋಪಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಸರ್ಕಾರದ ವಿರುದ್ಧ ಚಾರ್ಜ್‌ಶೀಟ್ ಬಿಡುಗಡೆ ಮಾಡಿದ ಒಂದು ದಿನದ ನಂತರ ಮಮತಾ ಬ್ಯಾನರ್ಜಿ ವಾಗ್ದಾಳಿಯನ್ನು ತೀಕ್ಷ್ಣಗೊಳಿಸಿದ್ದಾರೆ.

ಇಂದು ಪುರುಲಿಯಾ ಜಿಲ್ಲೆಯ ಮನ್ಬಜಾರ್‌ನಲ್ಲಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಬ್ಯಾನರ್ಜಿ, ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಜನರು ತಮ್ಮ ಆಹಾರ ಪದ್ಧತಿಯ ಆದ್ಯತೆಗಳ ಪ್ರಕಾರ ಮೀನು, ಮಾಂಸ ಮತ್ತು ಮೊಟ್ಟೆಗಳನ್ನು ತಿನ್ನಲು ಸಾಧ್ಯವಾಗುವುದಿಲ್ಲ. ಈಗಾಗಲೇ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಇವುಗಳನ್ನು ನಿಷೇಧಿಸಿದೆ. ಜನರ ಆಹಾರ ಪದ್ಧತಿಯನ್ನು ನಿರ್ಬಂಧಿಸಲು ನೀವು ಯಾರೆಂದು ಪ್ರಶ್ನಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಮೀನು, ಮಾಂಸ, ಮೊಟ್ಟೆ ತಿನ್ನುವುದನ್ನು ನಿಷೇಧಿಸುತ್ತಾರೆ. ನಿಮ್ಮ ಆಹಾರದ ಹಕ್ಕನ್ನು ಕಸಿದುಕೊಳ್ಳುತ್ತಾರೆ. ಕಾರಣ ಅವರಿಗೆ ಬೇರೆ ಯಾವುದೇ ಧರ್ಮದಲ್ಲಿ ನಂಬಿಕೆ ಇಲ್ಲ. ಬಿಜೆಪಿಗೆ ಗೊತ್ತಿರುವುದು ಗಲಭೆ ಮಾತ್ರ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಈ ಎಲ್ಲಾ ಆಹಾರ ಪದಾರ್ಥಗಳು ಪ್ರೋಟೀನ್‌ನಲ್ಲಿ ಸಮೃದ್ಧವಾಗಿವೆ ಮತ್ತು ಅಂತಹ ನಿರ್ಬಂಧಗಳನ್ನು ವಿಧಿಸಿದರೆ ನಿಮ್ಮ ಆರೋಗ್ಯವು ಹದಗೆಡುತ್ತದೆ. ನಾನು ಯಾವ ಸಂಗೀತ ವಾದ್ಯಗಳು, ಡ್ರಮ್‌ಗಳು, ಹಾರ್ಮೋನಿಯಂಗಳು, ಶಿಳ್ಳೆಗಳು, ಗಿಟಾರ್‌ಗಳು, ಸಿತಾರ್‌ಗಳನ್ನು ನುಡಿಸಬೇಕೆಂದು ನೀವು ನಿರ್ಧರಿಸುತ್ತೀರಾ ಎಂದು ಪ್ರಶ್ನಿಸಿದರು.

ಅಮಿತ್ ಶಾ ಅವರ ಹಿಂದಿನ ಕೃತ್ಯಗಳ ವಿರುದ್ಧ ಚಾರ್ಜ್‌ಶೀಟ್ ಹಾಕಬೇಕೆಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ತಿರುಗೇಟು ನೀಡಿ ದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಲಕ್ಷ್ಮಿ ಭಂಡಾರಿ ಯೋಜನೆಯನ್ನು ಸ್ಥಗಿತಗೊಳಿಸುವುದಾಗಿ ಆರೋಪಿಸಿದರು.

ಚಿನ್ನಾಭರಣ ಕಳವು

• ಪ್ರಜೋದಯ ವರದಿ

ಅರಸೀಕೆರೆ: ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಕಂತೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಅನ್ನಪೂರ್ಣ ಅವರು ವಾರದ ಹಿಂದೆ ಮನೆಗೆ ಬೀಗ ಹಾಕಿಕೊಂಡು ತುಮಕೂರಿನ ಸಹೋದರಿ ಮನೆಗೆ ತೆರಳಿದ್ದರು. ಮಾ.28ರಂದು ವಾಪಾಸ್ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಆಯುಧದಿಂದ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 8 ಗ್ರಾಂ ತೂಕದ ಎರಡು ಜೊತೆ ಸಾದಾ ಚಿನ್ನದ ಕಿವಿಯೊಲೆ, 2 ಗ್ರಾಂ ನ ಒಂದು ಜೊತೆ ಹರಳಿನ ಚಿನ್ನದ ಕಿವಿಯೊಲೆ, 2 ಗ್ರಾಂ ತೂಕದ ಚಿನ್ನದ ಕಿವಿಯೊಲೆ, 3 ಗ್ರಾಂ ತೂಕದ ಚಿನ್ನದ ಉಂಗುರ, 4 ಗ್ರಾಂನ ಉಂಗುರ, 10 ಗ್ರಾಂ ತೂಕದ ಎರಡು ಜೊತೆ ಬೆಳ್ಳಿಯ ಕುಂಕುಮ ಬಟ್ಟಲು, 10 ಗ್ರಾಂನ ಒಂದು ಜೊತೆ ಬೆಳ್ಳಿ ದೀಪ ಕದ್ದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರಗ್ಸ್ ಮುಕ್ತ ರಾಜ್ಯ ಸಂಕಲ್ಪ: ಸಿದ್ದರಾಮಯ್ಯ

• ಪ್ರಜೋದಯ ವರದಿ

ಬೆಂಗಳೂರು : ರಾಜ್ಯವನ್ನು ಮಾದಕ ವಸ್ತು ಮುಕ್ತ ಮಾಡುವುದು ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಭಾನುವಾರ ಮೈಸೂರು ಘಟಕದ 46ನೇ ತಂಡದ ಸಿವಿಲ್ ಪೊಲೀಸ್ ಉಪ ನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಂಡು ತರಬೇತಿ ಪೂರ್ಣಗೊಳಿಸಿದ ಎಲ್ಲಾ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ಶುಭ ಹಾರೈಸಿ ಮಾತನಾಡಿದ ಅವರು, ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಪೊಲೀಸರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ತಯಾರಕರು, ಮಾರಾಟ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕೆಂದರು.

ಮಾದಕ ವಸ್ತುಗಳು ಯುವ ಜನಾಂಗದ ಮೇಲೆ ಮಾರಕ ಪರಿಣಾಮ ಬೀರುತ್ತವೆ. ಇದನ್ನು ನಿರ್ಮೂಲನೆ ಮಾಡದೆ ಹೋದರೆ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯವಿಲ್ಲ. ಆದ್ದರಿಂದ ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಅಗತ್ಯ. ಮಾದಕ ವಸ್ತುಗಳ ಸರಬರಾಜು, ತಯಾರಿಕೆಯನ್ನು ನಿಲ್ಲಿಸಿ, ರಾಜ್ಯವನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿಸುವುದು ರಾಜ್ಯ ಸರ್ಕಾರದ ಸಂಕಲ್ಪವಾಗಿದೆ. ಈ ದಿಕ್ಕಿನಲ್ಲಿ ಸರ್ಕಾರ ಕಾರ್ಯತತ್ಪರವಾಗಿದೆ. ಪೊಲೀಸರಿಗೂ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದೇವೆಂದರು.

ಜನಸ್ನೇಹಿ ಮತ್ತು ಮಾನವೀಯತೆಯಿಂದ ಗುರುತಿಸಿ

ಪೊಲೀಸರು ಸದಾ ಜನ ಸ್ನೇಹಿಯಾಗಿರಬೇಕು ಮಾನವೀಯತೆಯಿಂದ ಕೆಲಸ ಮಾಡಬೇಕು. ಸಾರ್ವಜನಿಕರ ಜತೆ ಸ್ನೇಹದಿಂದ ಇರಬೇಕು. ಅಪರಾಧಿಗಳಿಗೆ ಕರುಣೆ ತೋರಬೇಕಿಲ್ಲ. ನಿರಪರಾಧಿಗಳಿಗೆ ಕರುಣೆ ತೋರಬೇಕು. ನ್ಯಾಯ ವಿತರಣೆ ಯಲ್ಲಿ ಪೊಲೀಸರು ಯಾವುದೇ ಕಾರಣಕ್ಕೂ ರಾಜಿಯಾಗ ಬಾರದೆಂದರು.

ಎಲ್ಲರಿಗೂ ರಕ್ಷಣೆ, ಸಮಾನ ಅವಕಾಶಗಳು ದೊರೆಯಬೇಕು. ಪೊಲೀಸ್ ಸೇವೆಯಲ್ಲಿ ಶಿಸ್ತು, ಸಂಯಮ, ಪ್ರಾಮಾಣಿಕತೆ, ಮಾನವೀಯತೆ ಬಹಳ ಮುಖ್ಯ. ಸಮಾಜದಲ್ಲಿ ಜಾತಿ ವ್ಯವಸ್ಥೆ ಇದೆ. ದೀನ ದಲಿತರ, ಅಶಕ್ತರ, ಮಹಿಳೆಯರ ರಕ್ಷಣೆ ಪೊಲೀಸರ ಜವಾಬ್ದಾರಿ. ಮಧ್ಯರಾತ್ರಿಯಲ್ಲಿ ಮಹಿಳೆಯರು ನಿರ್ಭಯವಾಗಿ ಓಡಾಡುವಂತಾದಾಗ ಮಾತ್ರ ನಿಜ ಅರ್ಥದಲ್ಲಿ ಸ್ವಾತಂತ್ರ್ಯ ದೊರೆತಂತೆ ಎಂದು ಮಹಾತ್ಮ ಗಾಂಧಿ ಅವರು ಹೇಳಿದ್ದರು. ಸಮಾಜದ ಪ್ರತಿಯೊಬ್ಬರಿಗೂ ಆರ್ಥಿಕ, ಸಾಮಾಜಿಕ ಸಮಾನತೆ ದೊರೆಯಬೇಕು. ಆದ್ದರಿಂದ ಪೊಲೀಸರು ನ್ಯಾಯವನ್ನು ಎತ್ತಿ ಹಿಡಿಯುವ ಕೆಲಸದಲ್ಲಿ ಯಾವುದೇ ಕಾರಣಕ್ಕೂ ರಾಜಿಯಾಗಬಾರದೆಂದು ಹೇಳಿದರು.

ಪೊಲೀಸರು ಸರ್ಕಾರದ ಪ್ರತಿನಿಧಿಗಳಾಗಿ ಕರ್ತವ್ಯ ನಿರ್ವಹಿಸಬೇಕು. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸಬೇಕು. ಸಮಾಜದ ದುರ್ಬಲ ವರ್ಗದವರನ್ನು ಮುಖ್ಯವಾಹಿನಿಗೆ ತರಬೇಕಾಗಿದೆ. ಆ ನಿಟ್ಟಿನಲ್ಲಿ ಪೊಲೀಸರು ಎಲ್ಲರಿಗೂ ರಕ್ಷಣೆ ಸಮಾನ ಅವಕಾಶಗಳು ಸಿಗುವಂತ ಕೆಲಸ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗುತ್ತಿವೆ. ಸೈಬರ್ ಅಪರಾಧಗಳನ್ನಾ ನಿಗ್ರಹಿಸಲು ಸೂಕ್ತ ತರಬೇತಿ ನೀಡಲಾಗುತ್ತಿದ್ದು, ಅವುಗಳನ್ನು ಬಳಕೆ ಮಾಡಿಕೊಂಡು ಸೈಬರ್ ಅಪರಾಧಗಳನ್ನು ನಿಯಂತ್ರಿಸಿ ಎಂದು ಪೊಲೀಸರಿಗೆ ತಾಕೀತು ಮಾಡಿದರು.

ಗೃಹ ಇಲಾಖೆಯಲ್ಲಿ ಖಾಲಿ ಇರುವ 8 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಬಜೆಟ್‌ನಲ್ಲಿ ಘೋಷಿಸಿದ್ದೇನೆ. ಅದನ್ನು ಮಾಡಿಯೇ ತೀರುತ್ತೇನೆ. ಖಾಲಿ ಇದ್ದ 4911 ಪೊಲೀಸ್ ಹುದ್ದೆಗಳನ್ನು ಮೂರು ವರ್ಷಗಳಲ್ಲಿ ಭರ್ತಿ ಮಾಡಲಾಗಿದೆ. ಇಂದಿನಿಂದ ತರಬೇತಿ ಪೂರ್ಣಗೊಂಡ 277 ಸಬ್ ಇನ್ಸ್‌ಪೆಕ್ಟರ್‌ಗಳು ಸೇವೆಗೆ ಸೇರ್ಪಡೆಯಾಗುತ್ತಿದ್ದಾರೆ. ಸರ್ಕಾರ ಸದಾ ನಿಮ್ಮೊಂದಿಗಿರುತ್ತದೆ. ಜನರ ರಕ್ಷಣೆ ಕೆಲಸವನ್ನು ಧೈರ್ಯದಿಂದ ಆಮಿಷಕ್ಕೊಳಗಾಗದೆ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಈ ಸಂದರ್ಭದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಪೊಲೀಸ್ ಮಹಾನಿರ್ದೇಶಕ ಸಲೀಂ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K